# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine

| | | | | |
|---|---|---|---|---|
| Vol -66 | Issue -06 | June 2025 | Pages: 28 | Annual Subscription: ₹ 200/- |
| ಸಂಪುಟ: 66 | ಸಂಚಿಕೆ: 06 | ಜೂನ್ 2025 | ಪುಟಗಳು: 28 | ವಾರ್ಷಿಕ ಚಂದ ರೂ. 200/- |





ಕರ್ನಾಟಕ ಸರ್ಕಾರದ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ "ವಿಶ್ವ ಪರಿಸರ ದಿನಾಚರಣೆ 2025"ರ ಅಂಗವಾಗಿ 17 ಜೂನ್ 2025ರ ಬೆಳಗ್ಗೆ 8 ಗಂಟೆಗೆ ವಿಧಾನಸೌಧದ ಪೂರ್ವದ್ವಾರದ ಮುಂಭಾಗದಲ್ಲಿ ಪರಿಸರ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಜಾಥಾ ಕಾರ್ಯಕ್ರಮವನ್ನು ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್‌ರವರು ಉದ್ಘಾಟಿಸಿದರು. ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನ್ಯ ಅಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶಿವಾಜಿನಗರ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ರಿಜ್ವಾನ್ ಹರ್ಷದ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ಲಿಂಗರಾಜು ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಜಾಥಾದಲ್ಲಿ ರಾಜ್ಯ ಸಂಸ್ಥೆಯಿಂದ 3000ಕ್ಕೂ ಹೆಚ್ಚು ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಭಾಗವಹಿಸಿದ್ದರು.




2025ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ 2000 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಶೇಕಡ 90 ಕ್ಕಿಂತಲೂ ಹೆಚ್ಚು ಅಂಕಗಳನ್ನು ಗಳಿಸಿರುತ್ತಾರೆ. 80 ಸ್ಕೌಟ್ಸ್–ಗೈಡ್ಸ್‌ಗಳು ರ್‍ಯಾಂಕ್‌ಗಳನ್ನು ಪಡೆದಿರುತ್ತಾರೆ. ಇವರುಗಳನ್ನು ರಾಜ್ಯ ಸಂಸ್ಥೆಯ ವತಿಯಿಂದ ದಿನಾಂಕ 30 ಮೇ 2025ರಂದು ಉಡುಪಿ ಶ್ರೀ ಕೃಷ್ಣಮಠದ ರಾಜಾಂಗಣದಲ್ಲಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ಶ್ರೀ ಸುಗಣೇಂದ್ರ ತೀರ್ಥ ಶ್ರೀಪಾದರು, ಶ್ರೀ ಸುಶೀಂದ್ರ ತೀರ್ಥ ಶ್ರೀಪಾದರು, ಶಾಸಕರಾದ ಶ್ರೀ ಯಶ್‌ಪಾಲ್ ಸುವರ್ಣ, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಉಡುಪಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿ, ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಅಭೀದ್ ಗದ್ಯಾಳ ಮತ್ತು ರಾಜ್ಯ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.





2025ರ ಜೂನ್ 20 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ಹಾಗೂ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ರವರನ್ನು ಭೇಟಿ ಮಾಡಿ ಸ್ಕೌಟ್–ಗೈಡ್ ಚಟುವಟಿಕೆಗಳ ಅಭಿವೃದ್ಧಿಯ ಬಗ್ಗೆ ಚರ್ಚಿಸಿದರು.

ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಗೃಹ ಸಚಿವರಾದ ಶ್ರೀ ಜಿ. ಪರಮೇಶ್ವರ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಶ್ರೀ ನಸೀರ್ ಅಹ್ಮದ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್, ಮುಖ್ಯಮಂತ್ರಿ ಅವರ ಅಪರ ಮುಖ್ಯ ಕಾರ್ಯದರ್ಶಿ ಶ್ರೀ ಅಂಜುಂ ಪರ್ವೆಜ್, ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್ ರಾಜ್ಯ ಆಯುಕ್ತರುಗಳಾದ ಶ್ರೀ ಎಂ. ಎ. ಖಾಲಿದ್ ಮತ್ತು ಶ್ರೀಮತಿ ಗೀತಾ ನಟರಾಜ್, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ರಾಜ್ಯ ಕಾರ್ಯದರ್ಶಿಯಾದ ಶ್ರೀ ಕೆ. ಗಂಗಪ್ಪಗೌಡ, ಶ್ರೀ ಎಂ. ಪ್ರಭಾಕರ್ ಭಟ್, ಶ್ರೀಮತಿ ಮಂಜುಳ .ಸಿ., ಶ್ರೀಮತಿ ಕೆ.ವಿ. ಶಾಮಲ, ಶ್ರೀ ಕೆ.ಹೆಚ್. ಜಯರಾಮಯ್ಯ, ಶ್ರೀ ನಾಗೇಶ್ ಶಿವಪುರ್ ಇತರರು ಉಪಸ್ಥಿತರಿದ್ದರು.

# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE

Vol: 66 Issue: 06 June 2025



**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಉಪಾಧ್ಯಕ್ಷರು**

ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ಮುಕ್ತ ಕಾಗಲೆ



ಸಂಚಿಕೆಯ ವಾರ್ಷಿಕ ಚಂದಾ ರೂ. 200/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಜುಲೈ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು ...05

ಅಭಿನಂದನೆಗಳು ...06

ಸಂಪಾದಕೀಯ ...07

ಮುಕ್ತದಳಗಳ ರಾಜ್ಯ ಮಟ್ಟದ ರ್‍ಯಾಲಿ ...08

ರೋವರ್ ರೇಂಜರ್ಸ್‌ಗಳ ರಜ್ಯ ಮಟ್ಟದ ಕಡಲತೀರ ಚಾರಣ ಶಿಬಿರ ...10

ರಾಜ್ಯ ಸಂಸ್ಥೆಯಿಂದ ಜರುಗಿದ ವಿವಿಧ ಕಾರ್ಯಕ್ರಮಗಳು ...11

State Level Service Camp of Rovers ...12

ಎಸ್ಎಸ್.ಎಲ್.ಸಿ. ಮತ್ತು ಪಿ.ಯು.ಸಿಯಲ್ಲಿ ಪ್ರತಿಭಾವಂತ
ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ಅಭಿನಂದನಾ ಸಮಾರಂಭ ...13

ಜಿಲ್ಲಾ ವಾರ್ತೆಗಳು ...14

ಶ್ರದ್ಧಾಂಜಲಿ ...26


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ಜೂನ್ ತಿಂಗಳು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಒಂದು ಕ್ರಿಯಾಶೀಲ ಮಾಸವಾಗಿದೆ ಎಂದು ಭಾವಿಸಿದ್ದೇನೆ. ರಾಜ್ಯ ಸಂಸ್ಥೆಯು ಜೂನ್ 2025ರಲ್ಲಿ ರಾಜ್ಯದಾದ್ಯಂತ ಆಯೋಜಿಸಿದ ತೃತೀಯ ಸೋಪಾನ ತರಬೇತಿ ಶಿಬಿರಗಳು, ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್‌ಗಳ ಮೂಲ ಹಾಗೂ ಮುಂದುವರೆದ ತರಬೇತಿಗಳು ಹಾಗೂ ದಳ ನಾಯಕರ ಸಭೆಗಳು, ಜೊತೆಗೆ ಸಂಸ್ಥೆಯು ಭಾಗವಹಿಸಿದ ವಿವಿಧ ಸಾರ್ವಜನಿಕ ಸಮಾರಂಭಗಳು ಸಂಘಟನೆಯ ಶಕ್ತಿಯನ್ನು ಬಲಪಡಿಸಲು ಮಹತ್ವದ ಪಾತ್ರವಹಿಸಿವೆ.

ನಮ್ಮ ಸಂಸ್ಥೆಯಿಂದ ರಾಜ್ಯಾದ್ಯಂತ 'ಪರಿಸರ ದಿನಾಚರಣೆ' ಮತ್ತು 'ಅಂತಾರಾಷ್ಟ್ರೀಯ ಯೋಗ ದಿನ'ವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಜೂನ್ 17 ರಂದು ಕರ್ನಾಟಕ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರ ಉದ್ಘಾಟನೆಯೊಂದಿಗೆ ಆಯೋಜಿಸಲಾಗಿದ್ದ ಪರಿಸರ ಮೆರವಣಿಗೆಯಲ್ಲಿ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಪರಿಸರದ ಬಗ್ಗೆ ಜಾಗೃತಿ ಮೂಡಿಸಿದರು. ಆ ದಿನ ಸಂಜೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿವಿಧ ಸಚಿವರುಗಳು ಭಾಗವಹಿಸಿದ್ದ ಸಮಾರಂಭದಲ್ಲಿ ಹಾಸನದ ಏಕಲವ್ಯ ಮುಕ್ತದಳ ಮತ್ತು ಜೀವಜಲ ಫೌಂಡೇಷನ್ ಸಂಸ್ಥೆಯು 2025ನೇ ಸಾಲಿನ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿಗೆ ಭಾಜನವಾಗಿರುವುದು ಸಂಸ್ಥೆಗೆ ಹೆಮ್ಮೆ ತಂದಿದೆ.

ಜೂನ್ 21ರಂದು ಆಯುಷ್ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾದ ಯೋಗ ದಿನಾಚರಣೆಯಲ್ಲಿ ನಮ್ಮ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್‌ಗಳು ಮತ್ತು ದಳ ನಾಯಕರುಗಳು ಭಾಗವಹಿಸಿ ಯೋಗದ ಮಹತ್ವವನ್ನು ಪ್ರಚುರಪಡಿಸಿದ್ದಾರೆ. ಸಾರ್ವಜನಿಕ ಮತ್ತು ಸರ್ಕಾರಿ ವಲಯದ ಮೆಚ್ಚುಗೆ ಗಳಿಸಿದ್ದಾರೆ. ಈ ಯಶಸ್ವಿ ಕಾರ್ಯಕ್ರಮಗಳಿಗೆ ಕಾರಣವಾದ ಸರ್ಕಾರ, ಸಂಬಂಧಪಟ್ಟ ಇಲಾಖೆಗಳು, ವಿಶೇಷವಾಗಿ ಶಿಕ್ಷಣ ಇಲಾಖೆ ಮತ್ತು ನಮ್ಮ ಸಂಸ್ಥೆಯ ಎಲ್ಲ ಪದಾಧಿಕಾರಿಗಳು, ಶಿಕ್ಷಕರು, ದಳನಾಯಕರುಗಳು ಹಾಗೂ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ರಾಜ್ಯ ಸಂಸ್ಥೆಯ ಪೋಷಕರಾಗಿರುವ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾಗಿ, ನಮ್ಮ ಚಟುಟಿಕೆಗಳನ್ನು ವಿವರಿಸಿದ್ದಲ್ಲದೆ, ಚಳುವಳಿಗೆ ಸಲ್ಲಿಸಿದ ಅರ್ಹತಾದಾಯಕ ಮತ್ತು ವಿಶಿಷ್ಟ ಸೇವೆಗಾಗಿ ಹಿರಿಯ ಸ್ವಯಂಸೇವಕರಿಗೆ ನಮ್ಮ ಸಂಸ್ಥೆಯಿಂದ ನೀಡಲಾಗುವ Medal of merit ಪದಕಗಳನ್ನು ನೀಡಲು ಸಮಯ ಕೇಳಿದ್ದು, ಅವರು ನವೆಂಬರ್ ತಿಂಗಳಲ್ಲಿ ದಿನಾಂಕ ನೀಡುವುದಾಗಿ ಹೇಳಿದ್ದಾರೆ.

ಈ ವರ್ಷದಲ್ಲಿ ಕಲಬುರ್ಗಿಯಲ್ಲಿ 29ನೇ ರಾಜ್ಯಮಟ್ಟದ ಸ್ಕೌಟ್ ಮತ್ತು ಗೈಡ್ ಜಾಂಬೋರೇಟ್ ಅನ್ನು ಆಯೋಜಿಸಲು ತೀರ್ಮಾನಿಸಿದ್ದು, ಇದರ ಸಂಬಂಧ, ಮಾನ್ಯ ಸಮಾಜ ಕಲ್ಯಾಣ ಸಚಿವರು ಹಾಗೂ ಕಲಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಪ್ರಿಯಾಂಕ ಖರ್ಗೆ ಅವರನ್ನು ಭೇಟಿಯಗಿ ಸರ್ಕಾರದ ಬೆಂಬಲಕ್ಕಾಗಿ ಚರ್ಚಿಸಿದ್ದು, ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಮತ್ತು ಎಲ್ಲಾ ರೀತಿಯ ಸಹಕಾರ ನೀಡುವ ಭರವಸೆ ನೀಡಿದ್ದಾರೆ.

ಮೇ 30, 2025 ರಂದು ಉಡುಪಿಯಲ್ಲಿ ನಮ್ಮ ಸಂಸ್ಥೆ ಆಯೋಜಿಸಿದ್ದ, ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್‌ಗಳು ಅಭಿನಂದನಾ ಸಮಾರಂಭ ಪುತ್ತಿಗೆ ಮಠದ ಪರ್ಯಾಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಆಶೀರ್ವಾದ ಹಾಗೂ ಶ್ರೀ ಮಠದ ಸಂಪೂರ್ಣ ಸಹಕಾರದೊಂದಿಗೆ ಸ್ಮರಣೀಯವಾಯಿತು. ಸ್ಕೌಟಿಂಗ್‌ನ ನೈತಿಕತೆ, ನಿಸ್ವಾರ್ಥ ಸೇವೆ ಮತ್ತು ವ್ಯಕ್ತಿತ್ವ ವಿಕಸನದ ಮಹತ್ವವನ್ನು ಶ್ಲಾಘಿಸಿದ ಪರಮಪೂಜ್ಯರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜೂನ್ 10 ರಂದು ಮೈಸೂರಿನಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ, ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ನಮ್ಮ ಸಂಸ್ಥೆಯ ಪ್ರತಿನಿಧಿಗಳು, ಪಾಲ್ಗೊಂಡು, ಸ್ಕೌಟಿಂಗ್–ಗೈಡಿಂಗ್ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಚರ್ಚಿಸಿದರು.

ಜೂನ್ 12 ರಂದು ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯದ ಉಪಕುಲಪತಿಗಳಾದ ಡಾ. ಎನ್. ವಿದ್ಯಾಶಂಕರ್ ಅವರನ್ನು ಭೇಟಿಯಾಗಿ, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ರೋವರ್–ರೇಂಜರ್ ಘಟಕಗಳ ಸ್ಥಾಪನೆಗೆ ಸಂಬಂಧಿಸಿದಂತೆ ಮನವಿ ಮಾಡಲಾಯಿತು. ಈ ರಚನಾತ್ಮಕ ಮಾತುಕತೆ, ಇಂಜಿನಿರಿಂಗ್ ಕಾಲೇಜುಗಳಲ್ಲಿ ರೋವರ್–ರೇಂಜರ್ ಘಟಕಗಳ ಸ್ಥಾಪನೆಯ ಸಾಧ್ಯತೆಗಳಿಗೆ ದಾರಿ ತೆರೆದಿದೆ.

ಜೂನ್ 15 ರಂದು ರಾಯಚೂರಿನಲ್ಲಿ ನಡೆದ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳ ಸಭೆಗೆ ಸಚಿವರಾದ ಶ್ರೀ ಎನ್.ಎಸ್. ಬೋಸರಾಜು ಮತ್ತು ಲೋಕಸಭಾ ಸದಸ್ಯರಾದ ಶ್ರೀ ಕುಮಾರ ನಾಯ್ಕ ಅವರು ಆಗಮಿಸಿ, ಜಿಲ್ಲೆಯಲ್ಲಿ ಚಟುವಟಿಕೆಗಳ ವಿಸ್ತರಣೆಗೆ ತಮ್ಮ ಬೆಂಬಲದ ಭರವಸೆ ನೀಡಿದರು.

ಜೂನ್ 20 ರಂದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿನಿಧಿಗಳೊಂದಿಗೆ ನಡೆಸಿದ ಮಹತ್ವದ ಸಭೆಯಲ್ಲಿ, ನಮ್ಮ ವಿವಿಧ ಮನವಿಗಳನ್ನು ಸಕಾರಾತ್ಮಕವಾಗಿ ಪರಿಗಣಿಸುವ ಭರವಸೆ ನೀಡಿದ್ದು, ವಿಶೇಷವಾಗಿ ಅತ್ಯುತ್ತಮ ಸ್ಕೌಟ್ ಮತ್ತು ಗೈಡ್, ರೋವರ್–ರೇಂಜರ್‌ಗಳಿಗೆ "ಮುಖ್ಯಮಂತ್ರಿಗಳ ಪಾರಿತೋಷಕ ಪದಕ" ನೀಡುವ ಹೊಸ ಕಾರ್ಯಕ್ರಮವನ್ನು ಪರಿಚಯಿಸುವುದಾಗಿ ಭರವಸೆ ನೀಡಿದರು. ಮಾನ್ಯ ಉಪ ಮುಖ್ಯಮಂತ್ರಿಗಳು, ಗೃಹ ಸಚಿವರು ಮತ್ತು ಇತರ ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆದ ಈ ಸಭೆ ಚಳುವಳಿಯ ಭವಿಷ್ಯಕ್ಕೆ ಹೊಸ ದಿಕ್ಕು ನೀಡುವಂತಾಗಿದೆ.

ರಾಜ್ಯದ ಎಲ್ಲ ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸುವ ಮೂಲಕ, ಅವರ ಜಿಲ್ಲೆಗಳಲ್ಲಿ ಸ್ಕೌಟ್ ಮತ್ತು ಗೈಡ್ ಚಳುವಳಿಯ ಪ್ರಗತಿಗೆ ಅಡ್ಡಿಯಾಗಿರುವ ಸವಾಲುಗಳನ್ನು ಗುರುತಿಸಿ, ಅವುಗಳಿಗೆ ಸೂಕ್ತ ಪರಿಹಾರ ಕ್ರಮಗಳನ್ನು ರೂಪಿಸುವ ಕಾರ್ಯ ಆರಂಭಿಸಲಾಗಿದೆ. ಕೆಲವು ಜಿಲ್ಲೆಗಳಿಗೆ ಖುದ್ದಾಗಿ ಭೇಟಿ ನೀಡಿದ್ದು, ಸ್ಥಳೀಯ ಸಮಸ್ಯೆಗಳನ್ನು ನೇರವಾಗಿ ಅರಿತುಕೊಳ್ಳುವ ಮತ್ತು ಅವುಗಳಿಗೆ ಪರಿಹಾರ ಸೂಚಿಸುವ ಪ್ರಯತ್ನ ಮಾಡಲಾಗಿದೆ. ಬೆಂಗಳೂರಿನ ಸುತ್ತಲಿನ ಜಿಲ್ಲೆಗಳ ಸಭೆಗಳನ್ನು ರಾಜ್ಯ ಸಂಸ್ಥೆಯ ಕಛೇರಿಯಲ್ಲಿ ಆಯೋಜಿಸಲಾಗಿದ್ದು, ಈ ಸಭೆಗಳು ಪರಸ್ಪರ ಅವಗಾಹನೆ, ಸಹಕಾರ ಮತ್ತು ಸಮನ್ವಯವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಭಾವಿಸಿದ್ದೇನೆ. ಈ ಎಲ್ಲ ಚಟುವಟಿಕೆಗಳು ನಮ್ಮ ಸಂಸ್ಥೆಯ ತಾತ್ವಿಕ ಮೌಲ್ಯಗಳು, ಸಾಮಾಜಿಕ ಬದ್ಧತೆ ಹಾಗೂ ಯುವಜನತೆಗೆ ನೀಡುವ ನೈತಿಕ ಮಾರ್ಗದರ್ಶನವನ್ನು ಪ್ರತಿಬಿಂಬಿಸುವುದರ ಜೊತೆಗೆ ಸಂಘಟನೆಯ ಸಮರ್ಥ ಮತ್ತು ಸಮಗ್ರ ಬೆಳವಣಿಗೆಗೆ ಬಲ ನೀಡಿವೆ.

ನಮ್ಮ ಸಂಸ್ಥೆಯ ನಾಯಕರಲ್ಲೊಬ್ಬರಾಗಿರುವ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಅವರನ್ನು ಸರ್ಕಾರ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಅತ್ಯಂತ ಸಂತೋಷದ ವಿಚಾರ. ಅವರಿಗೆ ಈ ಜವಾಬ್ದಾರಿಯಲ್ಲಿ ಯಶಸ್ಸು ಸಿಗಲೆಂದು ಆಶಿಸುತ್ತೇನೆ.

ಗಗನಯಾತ್ರಿ, ಶ್ರೀ ಶುಭಾಂಷು ಶುಕ್ಲ ಅವರ ಭವ್ಯ ಅಂತರಿಕ್ಷ ಯಾನದ ಸಾಧನೆಗೆ ರಾಜ್ಯ ಸಂಸ್ಥೆಯ ಪರವಾಗಿ ಮತ್ತು ವೈಯಕ್ತಿಕವಾಗಿ ನಾನು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರ ಭವಿಷ್ಯದ ಪಯಣ ಇನ್ನಷ್ಟು ಎತ್ತರಗಳನ್ನು ತಲುಪಲಿ ಎಂಬುದು ನಮ್ಮೆಲ್ಲರ ಹಾರೈಕೆ. ಭಾರತಕ್ಕೆ ಹೆಮ್ಮೆ ತಂದಿರುವ ಅವರ ಈ ಸಾಧನೆ ನಮ್ಮ ಯುವ ಮನಸ್ಸುಗಳಿಗೆ ಪ್ರೇರಣೆಯ ಮೂಲವಾಗಿದೆ. ನಮ್ಮ ಚಳುವಳಿಗೆ ದೀರ್ಘಕಾಲದ ಸೇವೆ ಸಲ್ಲಿಸಿರುವ ಹಿರಿಯ ನಾಯಕ ಶ್ರೀ ಟಿ.ಎಸ್. ಲೂಕಾಸ್ ಅವರಿಗೆ ಪ್ರತಿಷ್ಠಿತ "ಕೆಂಪೇಗೌಡ ಪ್ರಶಸ್ತಿ" ಲಭಿಸಿರುವುದು ನಮ್ಮ ಸಂಸ್ಥೆಗೆ ಹೆಮ್ಮೆ ಮತ್ತು ಗೌರವ ತಂದಿದೆ. ಈ ಗೌರವದ ಕ್ಷಣದಲ್ಲಿ ಸಂಸ್ಥೆಯ ಪರವಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರತಿ ವರ್ಷದಂತೆ, ನಮ್ಮ ಸಂಸ್ಥೆಯು "2025-26ನೇ ಸಾಲಿನ ವಾರ್ಷಿಕ ಕಾರ್ಯಕ್ರಮಗಳ ಯೋಜನೆ ಪುಸ್ತಕ"ವನ್ನು ಸಿದ್ಧಪಡಿಸಿದ್ದು, ಅವುಗಳನ್ನು ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಸಂಸ್ಥೆಗಳಿಗೆ ಕಳುಹಿಸಲಾಗುತ್ತಿದೆ. ಈ ಯೋಜನೆ ಪ್ರಸಕ್ತ ವರ್ಷದ ಚಟುವಟಿಕೆಗಳ ಯಶಸ್ಸಿಗೆ ಮಾರ್ಗದರ್ಶಿಯಾಗಲಿದೆ.

ನಮ್ಮ ಎಲ್ಲಾ ಕಾರ್ಯಕ್ರಮಗಳು ಸರ್ಕಾರ, ಜಿಲ್ಲಾಡಳಿತ, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕ ಮುಖಂಡರುಗಳು, ಮಠ ಮಾನ್ಯರು, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಹಾಗೂ ಪೋಷಕರ ಅಮೂಲ್ಯ ಸಹಕಾರದೊಂದಿಗೆ ಮತ್ತು ವಿಶೇಷವಾಗಿ ನಮ್ಮ ಸಂಸ್ಥೆಯ ಪದಾಧಿಕಾರಿಗಳು ಹಾಗೂ ದಳ ನಾಯಕರುಗಳ ಶ್ರಮ, ನಿಷ್ಠೆ ಮತ್ತು ಬದ್ಧತೆಯಿಂದ ಯಶಸ್ವಿಯಾಗಿ ನಡೆಯುತ್ತಿವೆ. ಇದೇ ಆಶಯದೊಂದಿಗೆ, ಈ ವರ್ಷವೂ ಹೆಚ್ಚು ಉತ್ಸಾಹದಿಂದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿ, ದಾಖಲೆಯ ಸಾಧನೆಗಳತ್ತ ಮುಂದಿನ ಹೆಜ್ಜೆ ಇಡುತ್ತೇವೆ ಎಂಬ ವಿಶ್ವಾಸವಿದೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಜುಲೈ 2025ರ ಕಾರ್ಯಕ್ರಮಗಳು ಮತ್ತು ತರಬೇತಿಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಮೇಜರ್ ವೈ.ವಿ.ಕೆ. ಮೂರ್ತಿರವರ ಹುಟ್ಟುಹಬ್ಬ | 04.07.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 2 | ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಹುಟ್ಟುಹಬ್ಬ | 18.07.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 3 | ಕಾರ್ಗಿಲ್ ವಿಜಯೋತ್ಸವ | 26.07.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 4 | ಪೋಷಕರ ದಿನಾಚರಣೆ | 27.07.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 5 | ರೋವರ್ಸ್-ರೇಂಜರ್ಸ್‌ಗಳಿಗೆ ಐತಿಹಾಸಿಕ ಸ್ಥಳಗಳ ಮಾಹಿತಿ ಶಿಬಿರ | - | ಜಿಲ್ಲಾ ತರಬೇತಿ & ಶಿಬಿರ ಕೇಂದ್ರ ಬುರಣಾಪುರ, ವಿಜಯಪುರ ಜಿಲ್ಲೆ |
| 6 | ಸ್ಕೌಟ್-ಗೈಡ್, ರೋವರ್-ರೇಂಜರ್‌ಗಳಿಗೆ ಕರಕುಶಲತೆ & ಕೌಶಲ್ಯ ತರಬೇತಿ ಶಿಬಿರ | - | ಜಿಲ್ಲಾ ಕೇಂದ್ರ ಕಛೇರಿ, ಕೋಲಾರ ಜಿಲ್ಲೆ |
| 7 | ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮೂಲ ತರಬೇತಿ ಶಿಬಿರ | 17.07.2025 ರಿಂದ 23.07.2025 | ಡಾ॥ ಅನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 8 | ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳ ಮುಂದುವರೆದ ತರಬೇತಿ ಶಿಬಿರ | 17.07.2025 ರಿಂದ 23.07.2025 | ಡಾ॥ ಅನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 9 | ಕಬ್ ಮಾಸ್ಟರ್ಸ್, ಸ್ಕೌಟ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್ ಮತ್ತು ಗೈಡ್ ಕ್ಯಾಪ್ಟನ್ಸ್‌ಗಳ ಮುಂದುವರೆದ ತರಬೇತಿ ಶಿಬಿರ | 17.07.2025 ರಿಂದ 23.07.2025 | ಡಾ॥ ಅನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |

# ಅಭಿನಂದನೆಗಳು



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯದ ಹಿರಿಯ ತರಬೇತಿ ನಾಯಕರು, ಮಾಜಿ ಉಪಾಧ್ಯಕ್ಷರು ಮತ್ತು ಮಾಜಿ ರಾಜ್ಯ ಸ್ಕೌಟ್ ಆಯುಕ್ತರು ಆಗಿರುವ **ಶ್ರೀ ಟಿ.ಎಸ್. ಲೂಕಾಸ್** ರವರಿಗೆ 2025ನೇ ಸಾಲಿನ ಪ್ರತಿಷ್ಠಿತ ಪ್ರಶಸ್ತಿಯಾದ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ದೊರಕಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ. ಶ್ರೀಯುತರಿಗೆ ರಾಜ್ಯ ಸಂಸ್ಥೆಯಿಂದ ಹೃದಯ ಪೂರ್ವಕ ಅಭಿನಂದನೆಗಳು.

ದಕ್ಷಿಣ ಕನ್ನಡ ಜಿಲ್ಲೆ, ಮೂಡುಬಿದರೆ ಜಿಲ್ಲೆಯ 'ಆಳ್ವಾಸ್' ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರು ಆಗಿರುವ **ಡಾ॥ ಎಂ. ಮೋಹನ್ ಆಳ್ವ** ಅವರಿಗೆ ಕನ್ನಡ ಪುಸ್ತಕ ಪ್ರಾಧಿಕಾರವು 2020-21ನೇ ಸಾಲಿನ 'ಡಾ॥ ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ'ಯನ್ನು 2025 ಜೂನ್ 4ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನೀಡಿ ಗೌರವಿಸಿದೆ. ಶ್ರೀಯುತರಿಗೆ ರಾಜ್ಯ ಸಂಸ್ಥೆಯಿಂದ ಹೃದಯ ಪೂರ್ವಕ ಅಭಿನಂದನೆಗಳು.





ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ರಾಜ್ಯಸಂಸ್ಥೆಯ ಸಹಾಯಕ ರಾಜ್ಯ ಆಯುಕ್ತರಾದ **ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ** ಅವರನ್ನು ಕರ್ನಾಟಕ ಸರ್ಕಾರ ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪ ಪ್ರತಿಷ್ಠಾನದ ಅಧ್ಯಕ್ಷರನ್ನಾಗಿ ನೇಮಿಸಿರುವುದು ಹೆಮ್ಮೆಯ ವಿಷಯವಾಗಿದೆ. ಶ್ರೀಯುತರಿಗೆ ರಾಜ್ಯ ಸಂಸ್ಥೆಯಿಂದ ಹೃದಯಪೂರ್ವಕ ಅಭಿನಂದನೆಗಳು.

ಹಾಸನ ಜಿಲ್ಲೆಯ ಕನ್ನಡದ ಲೇಖಕಿ **ಶ್ರೀಮತಿ ಬಾನು ಮುಷ್ತಕ್ ಅವರು** ಬರೆದಿರುವ ಕನ್ನಡದ ಸಣ್ಣ ಕಥೆಗಳ ಇಂಗ್ಲೀಷ್ ಅನುವಾದಿತ ಸಂಕಲನ 'ಹಾರ್ಟ್ ಲ್ಯಾಂಪ್' ಕೃತಿಗೆ 'ಅಂತಾರಾಷ್ಟ್ರೀಯ ಬುಕರ್ಪ್ರಶಸ್ತಿ'ಗೆ ಆಯ್ಕೆಯಾಗಿದ್ದು, ಟಾಪ್ ಆರು ಸ್ಪರ್ಧೆಗಳಲ್ಲಿ ಸ್ಥಾನ ಪಡೆದಿದೆ. ಶ್ರೀಮತಿ ಬಾನು ಮುಷ್ತಾಕ್ ಅವರಿಗೆ ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು.





ಕರ್ನಾಟಕ ಸರ್ಕಾರವು ಪ್ರತಿವರ್ಷ ನೀಡುವ 'ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ'ಗೆ 2025ನೇ ಸಾಲಿನಲ್ಲಿ ಹಾಸನ ಜಿಲ್ಲೆಯ ರೋವರ್ ಲೀಡರ್ ಹಾಗೂ 'ಏಕಲವ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮುಕ್ತದಳ ಮತ್ತು ಜೀವಜಲ ಫೌಂಡೇಶನ್' ಸಂಸ್ಥಾಪಕರಾದ **ಶ್ರೀ ಆರ್.ಜಿ. ಗಿರೀಶ್ ಮತ್ತು ಅವರ ತಂಡಕ್ಕೆ** ಅವರ ಸ್ಕೌಟ್ ಗೈಡ್ ಚಟುವಟಿಕೆಗಳನ್ನು ಗುರುತಿಸಿ ಜೂನ್ 17, 2025ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯರವರು ಪ್ರಶಸ್ತಿ ನೀಡಿ ಗೌರವಿಸಿದರು. ಶ್ರೀಯುತರಿಗೆ ಮತ್ತು ಅವರ ಸ್ಕೌಟ್ಸ್-ಗೈಡ್ಸ್ ಮುಕ್ತದಳ ತಂಡಕ್ಕೆ ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು.

# ಸಂಪಾದಕೀಯ



ಮಾನ್ಯರೆ,

ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮತ್ತು ಅವರಲ್ಲಿ ಗುಣಾತ್ಮಕ ಶಿಕ್ಷಣ ಹೆಚ್ಚಿಸಿ, ಅವರು ಸತ್ಪ್ರಜೆಗಳಾಗಿ, ಭವ್ಯ ಭಾರತದ ರೂವಾರಿಗಳಾಗುವಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಪಾತ್ರ ಅಪಾರ. ಇದರ ಸಕಾಲಿಕ, ಸಮರ್ಪಕ ಅನುಷ್ಠಾನದಲ್ಲಿ ರಾಜ್ಯ ಮುಖ್ಯ ಆಯುಕ್ತರಾಗಿರುವ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು, ತಮ್ಮೊಂದಿನ ಸ್ಕೌಟ್ಸ್–ಗೈಡ್ಸ್‌ನ ಭಾಗೀದಾರರುಗಳೆಲ್ಲರೊಂದಿಗೆ, ಅವರುಗಳ ಮನಗಳನ್ನು ಮೆಚ್ಚುಸುತ್ತಾ, ಸದಾ ಕಾಲ, ಕಾಯಾ, ವಾಚಾ, ಮನಸಾ ಶ್ರಮಿಸುತ್ತಿರುವುದು ತುಂಬಾ ಪ್ರೇರಣಾತ್ಮಕ ಆಗಿರುವುದು ಇವರುಗಳೆಲ್ಲರ ಶ್ರಮದಿಂದಾಗಿ, ಈ ಹಿಂದಿನ ವರ್ಷದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಳುವಳಿಯ ಸಾಧನೆಯಲ್ಲಿ ನಮ್ಮ ರಾಜ್ಯ ಸಂಸ್ಥೆಯು ದೇಶದಲ್ಲೇ ಪ್ರಥಮ ಸ್ಥಾನ ಹೊಂದಿ "Champion of the States" ಎಂಬ ಪ್ರಶಸ್ತಿಗೆ ಪಾತ್ರ ಆಗಿರುವುದು ಹೆಮ್ಮೆಯದಾಯಕ. ಅಲ್ಲದೆ 2024–25ನೇ ಸಾಲಿನಲ್ಲಿ ಸ್ಕೌಟ್ಸ್–ಗೈಡ್ಸ್ ಚಳುವಳಿಯಲ್ಲಿ ಭಾಗಿದಾರರಾಗಿರುವ ವಿದ್ಯಾರ್ಥಿಗಳ ಸಂಖ್ಯೆ–ಗಣತಿ ಸುಮಾರು 7.84ಲಕ್ಷ ಆಗಿರುವುದು all-time Record ಆಗಿರುವುದಾಗಿದ್ದು, ಬಹಳಷ್ಟು ಹರ್ಷವನ್ನುಂಟುಮಾಡಿರುವುದು.

ರಾಜ್ಯ ಸಂಸ್ಥೆಯ ಘನೋದ್ದೇಶಗಳು ಯಶಸ್ವಿ ಆಗಿ ನಿರ್ವಹಣೆ ಆಗುವಲ್ಲಿ ಜೂನ್ 2025ರಲ್ಲಿ ಕೈಗೊಂಡ ಈ ಕೆಳಕಂಡ ವಿಶಿಷ್ಠ ಕಾರ್ಯಚಟುವಟಿಕೆಗಳು ಬಹಳಷ್ಟು ಅರ್ಥಗರ್ಭಿತವಾಗಿರುವವು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸುತ್ತಾ, ಅವುಗಳ ಸಮರ್ಪಕ ಅನುಷ್ಠಾನದಲ್ಲಿ ಸರ್ವರೂ ಸಕ್ರಿಯವಾಗಿ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತೇನೆ.

**2025–26 ನೇ ಸಾಲಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಯೋಜನಾ ಕಾರ್ಯಕ್ರಮಗಳು:** 2025–26ನೇ ಸಾಲಿನಲ್ಲಿ ಸ್ಥಳೀಯ ಸಂಸ್ಥೆಯ ಹಂತದಿಂದ ರಾಜ್ಯ ಸಂಸ್ಥೆಯ ಹಂತದ ವರೆಗಿನ ಎಲ್ಲರೂ ಏಪ್ರಿಲ್ 2025 ರಿಂದ ಮೇ 2026ರ ವರೆಗೆ ದಿನಾಂಕಗಳು, ತಿಂಗಳವಾರು ನಿರ್ವಹಿಸಬೇಕಾದ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕಾರ್ಯಕ್ರಮ, ಚಟುವಟಿಕೆಗಳು, ತರಬೇತಿಗಳು, ವಿಶೇಷ ಸಮುದಾಯ ಸೇವೆಗಳ ಬಗ್ಗೆ ಸ್ಪಷ್ಟ ಮಾಹಿತಿ ನೀಡಿರುವುದಾಗಿದೆ. ಇದನ್ನು ಸಂಬಂಧಪಟ್ಟವರೆಲ್ಲರಿಗೂ ಕಳುಹಿಸಲಾಗಿದ್ದು, ಅದರಂತೆ ಸರ್ವರೂ ಕಾರ್ಯಾನುಷ್ಠಾನಗೊಳಿಸಲು ವಿನಂತಿಸಿದೆ. ಇದರಲ್ಲಿ ಗೌರವಾನ್ವಿತ ರಾಜ್ಯಪಾಲರು, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ರಾಜ್ಯ ಮುಖ್ಯ ಕಾರ್ಯದರ್ಶಿಗಳು ಶಿಕ್ಷಣ ಇಲಾಖಾ ಮುಖ್ಯಸ್ಥರುಗಳು, ಇಲಾಖಾಧಿಕಾರಿಗಳು ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್‌ನ ಇತರೆ ಅಭಿಮಾನಿಗಳ ಶುಭ ಹಾರೈಕೆಗಳೊಂದಿನ ಶುಭಾಷಯಗಳು ಇರುವುದಲ್ಲದೆ, ಅವರು ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಸಕ್ರಿಯ ಅನುಷ್ಠಾನದ ಬಗ್ಗೆ ಬಹಳ ಆಸಕ್ತಿ ಹೊಂದಿರುವುದನ್ನು ಸ್ಪಷ್ಟಪಡಿಸಿರುವುದನ್ನು ಮನಗಾಣಬಹುದಾಗಿದೆ. ಅದನ್ನು ಅರಿತು ಈ ಚಳುವಳಿಯನ್ನು ಯಶಸ್ವಿಗೊಳಿಸುವಲ್ಲಿ ಸರ್ವರೂ ಸಹಕರಿಸಬೇಕಾಗಿ ವಿನಂತಿಸುತ್ತೇನೆ.

**ಪರಿಸರ ದಿನಾಚರಣಾ ಕಾರ್ಯಕ್ರಮಗಳು:** ಭೂಮಿಯು ಒಟ್ಟಾರೆ ಸ್ಥಿತಿಗತಿ ನಿಜಕ್ಕೂ ದಿನೇ ದಿನೇ ಆತಂಕಕಾರಿ ಆಗಿರುವುದು ಸ್ಪಷ್ಠ. ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದ ಮಾಲಿನ್ಯ, ಭೂಮಿ ಮಾಲಿನ್ಯ, ಮುಂತಾದವುಗಳು ದಿನೇ ದಿನೇ ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟುವಲ್ಲಿ ಎಲ್ಲರ ಸಹಭಾಗಿತ್ವ ಬಹಳ ಮುಖ್ಯ ಆಗಿರುವುದು. ಇದನ್ನು ಮನಗಂಡು ಮಾನ್ಯ ರಾಜ್ಯ ಮುಖ್ಯ ಆಯುಕ್ತರು, ಸಂಬಂಧಟ್ಟ ವಿವಿಧ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ, ಈ ಕೆಳಕಂಡ ಕಾರ್ಯಚಟುವಟಿಕೆಗಳು ಸ್ಕೌಟ್ಸ್–ಗೈಡ್ಸ್ ಚಳುವಳಿಯ ಮುಖ್ಯ ಕಾರ್ಯಗಳಾಗುವಲ್ಲಿ ಕ್ರಮ ವಹಿಸಿ, ಅನುಷ್ಠಾನಕ್ಕೆ ಕ್ರಮ ವಹಿಸಿರುವುದು ಹರ್ಷದಾಯಕ.

ಎ) ಡಾ|| ರೀತು ಗಂಜಿಗಟ್ಟಿರವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲು ಹಮ್ಮಿಕೊಂಡಿರುವ "Time-up" ಕಾರ್ಯಕ್ರಮದ ಅನುಷ್ಠಾನ.

ಬಿ) BBC Media Action ಮತ್ತು ಕರ್ನಾಟಕ ಸರ್ಕಾರದ ಪರಿಸರ ಇಲಾಖೆಯವರ ಸಹಕಾರದೊಂದಿಗೆ ಅನುಷ್ಠಾನಗೊಳಿಸಲು ಕೈಗೊಂಡಿರುವ "Text-Tile Waste Management Programme"

ಇವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಬೆಂಗಳೂರು ದಕ್ಷಿಣ ಜಿಲ್ಲೆಯವರ ನೇತೃತ್ವ ವಹಿಸುವುದರೊಂದಿಗೆ, ಇತರರೂ ಇದನ್ನು ಕೈಗೊಳ್ಳಲು ವಿನಂತಿಸಿದೆ. ಈ ವರ್ಷದ ರಾಜ್ಯ ಮಟ್ಟದ ಪರಿಸರ ದಿನಾಚರಣಾ ಸಮಾರಂಭದಲ್ಲಿ ಹಾಸನದ ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಶ್ರೀ. ಗೀರಿಶ್, ರೋವರ್ ಸ್ಕೌಟ್ ಲೀಡರ್ ಇವರು ರಾಜ್ಯ ಪ್ರಶಸ್ತಿ ಪಡೆದಿರುವುದಕ್ಕೆ ಅನಂತಾನಂತ ಅಭಿನಂದನೆಗಳು.

**ಅಂತರಾಷ್ಟ್ರೀಯ ಯೋಗ ದಿನಾಚರಣಾ ಅನುಷ್ಠಾನ ಕಾರ್ಯ ಚಟುವಟಿಕೆಗಳು:** ಯೋಗಾಭ್ಯಾಸವು ವಿದ್ಯಾರ್ಥಿಗಳ ದೈಹಿಕ, ಮಾನಸಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮುಂತಾದ ಅವರ ಬದುಕಿನ ಮಹತ್ತರ ಮತ್ತು ಅರ್ಥಗರ್ಭಿತ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಮನಗಂಡು, ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಅದನ್ನು ಸಹಾ ನಿರ್ವಹಿಸುವಲ್ಲಿ "ಯೋಗ ಪ್ರವೀಣ್ ವಿದ್ಯಾ" ಸಾಧನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸುತ್ತಿರುವುದು ಹರ್ಷದಾಯಕ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಇದನ್ನು ಅನುಷ್ಠಾನಗೊಳಿಸುವಲ್ಲಿ ಈಗಾಗಲೇ ಕ್ರಮ ವಹಿಸಿರುವುದನ್ನು ತಿಳಿಸಬಯಸುತ್ತೇನೆ. Champion of Super Brain Asan, Rhythmic Yogic Breathing, Forgiveness Sadhana ಮತ್ತು Planetary Peace Meditation along with basic physical exercises ಮೂಲಕ ಈ Yoga Pravin Vidya ಸಾಧನ ಯೋಗ ಚಟುವಟಿಕೆ ಆಗಿರುವುದು. ಇದರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಘಟಕದ ನಾಯಕರುಗಳಿಗೆ ತಿಳಿಸಲಾಗುವುದು. ಅದನ್ನು ಅರಿತು ಅನುಷ್ಠಾನಗೊಳಿಸುವುದು ತುಂಬಾ ಶ್ರೆಯಸ್ಕರ ಆಗುವುದು

**ಪ್ರತಿಭಾ ಪುರಸ್ಕಾರ ಕಾರ್ಯಕ್ರಮ.:** ಮಾರ್ಚ್ ಮತ್ತು ಏಪ್ರಿಲ್ 2025ರಲ್ಲಿ ಏರ್ಪಟ್ಟ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪಬ್ಲಿಕ್ ಪರೀಕ್ಷೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿದ್ಯಾರ್ಥಿಗಳಲ್ಲಿ 2000ಕ್ಕು ಹೆಚ್ಚು ವಿದ್ಯಾರ್ಥಿಗಳು 90% ಕಿಂತ ಹೆಚ್ಚು ಅಂಕ ಪಡೆದಿರುವುದು ಅವರಲ್ಲಿ 40ಕ್ಕು ಹೆಚ್ಚು ವಿದ್ಯಾರ್ಥಿಗಳು 10ನೇ ರ್‍ಯಾಂಕ್‌ಗೊಳಗೆ ರ್‍ಯಾಂಕ್ ಪಡೆದಿದ್ದು, ಅವರೆಲ್ಲರನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಸಂಸ್ಥೆಯಿಂದ ಸನ್ಮಾನಿಸಿರುವುದು ಎಂಬುದನ್ನು ತಿಳಿಸಲು ಹರ್ಷಸುತ್ತೇನೆ. ತನ್ಮೂಲಕ ಸ್ಕೌಟ್ಸ್–ಗೈಡ್ಸ್‌ನಲ್ಲಿ ಭಾಗವಹಿಸುವುದು ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣಕ್ಕೆ ಪ್ರೇರಕವೇ ವಿನಹ, ಮಾರಕ ಅಲ್ಲ ಎಂಬುದನ್ನು ಸ್ಪಷ್ಠ ಪಡಿಸಬಯಸುತ್ತೇನೆ.

ಸರ್ಕಾರ, ವಿವಿಧ ಇಲಾಖೆಗಳವರಿಂದ ಪ್ರೋತ್ಸಾಹ: ಜೂನ್ 2025ರಲ್ಲಿ ಸರ್ಕಾರದಿಂದ ಏರ್ಪಟ್ಟ ವಿವಿಧ ಸಭೆ, ಸಮಾರಂಭಗಳಲ್ಲಿ ಪರಿಸರ ದಿನಾಚರಣಾ ಸಮಾರಂಭ, ಯೋಗ ದಿನಾಚರಣಾ ಸಮಾರಂಭ, ಮುಂತಾದವುಗಳಲ್ಲಿ ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ನೂರಾರು–ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಲು ಅವಕಾಶಕೊಟ್ಟು ಪ್ರೋತ್ಸಾಹಿಸಿರುವುದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಅನಂತಾನಂತ ಕೃತಜ್ಞತೆಗಳನ್ನು ತಿಳಿಸಬಯಸುತ್ತೇನೆ.

**ರಾಜ್ಯ ಮಟ್ಟದ ಪುರಸ್ಕಾರ:** ಜೂನ್ 28 ರಂದು ಏರ್ಪಟ್ಟ ಪ್ರತಿಷ್ಠಿತ ನಾಡಪ್ರಭು ಕೆಂಪೇಗೌಡ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಗಣ್ಯರಾದ ಶ್ರೀ ಟಿ.ಎಸ್. ಲೂಕಾಸ್, Ex-executive Director, National Headquarters ಹಾಗೂ ಹಿಂದಿನ ರಾಜ್ಯ ಆಯುಕ್ತರು(ಸ್ಕೌಟ್), ಇವರು ಪ್ರತಿಷ್ಠಿತ 'ಕೆಂಪೇಗೌಡ ಪ್ರಶಸ್ತಿ'ಗೆ ಆಯ್ಕೆಯಾಗಿ ಸನ್ಮಾನಿಸಲ್ಪಟ್ಟಿರುವುದು ಹೆಮ್ಮೆಯ ವಿಷಯ ಆಗಿರುವುದು.

ಒಟ್ಟಿನಲ್ಲಿ ಜೂನ್ 2025ರ ಮಾಹೆಯಲ್ಲಿ ಬಹಳ ಮಹತ್ತರ ಮತ್ತು ಅರ್ಥಗರ್ಭಿತ ಕಾರ್ಯಚಟುವಟಿಕೆಗಳು, ತರಬೇತಿಗಳು ನಿರ್ವಹಣೆ ಆಗಿದ್ದು, ತನ್ಮೂಲಕ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಘನ ಕಾರ್ಯಚಟುವಟಿಕೆಗಳನ್ನು ಯಶಸ್ವಿಗೊಳಿಸಿ, ಮುಂದುವರಿಸುವಲ್ಲಿ ಬಹಳ ಸಹಕಾರಿ ಆಗಿರುವುದು. ಈ ಯಶಸ್ಸಿಗೆ ಶ್ರಮಿಸುತ್ತಾ ಸಹಕರಿಸಿದ ಸರ್ವರಿಗೂ ವಂದನೆಗಳು.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಮುಕ್ತ ದಳಗಳ ರಾಜ್ಯಮಟ್ಟದ ರ್‍ಯಾಲಿ




ಮೇ 27 ರಿಂದ 29ರ ವರೆಗೆ ಜಿಲ್ಲಾ ಸ್ಕೌಟ್ ಭವನ ಶಿವಮೊಗ್ಗ ಆವರಣದಲ್ಲಿ ಜಸ್ಟೀಸ್ ಕೆ. ಶಂಕರನಾರಾಯಣರಾವ್ ಸ್ಮಾರಕ "ಮುಕ್ತದಳಗಳ ರಾಜ್ಯ ಮಟ್ಟದ ರ್‍ಯಾಲಿ"ಯನ್ನು ಆಯೋಜಿಸಲಾಗಿತ್ತು. ಮೇ 26ರ ಸಂಜೆ ಸ್ಥಳೀಯ ಪ್ರದರ್ಶನದ ಅಂಗವಾಗಿ ಶ್ರೀ ಪ್ರಶಾಂತ್ ಎಸ್. ಹೆಗಡೆ ಇವರಿಂದ ಮ್ಯಾಜಿಕ್ ಶೋ ಏರ್ಪಡಿಸಲಾಗಿತ್ತು. ಮೇ 27ರ ಬೆಳಗ್ಗೆ 10.30 ಗಂಟೆಗೆ ಶಿವಮೊಗ್ಗ ನಗರದ ಮಾನ್ಯ ಶಾಸಕರಾದ ಶ್ರೀ ಎಸ್.ಎನ್. ಚನ್ನಬಸಪ್ಪ (ಚೆನ್ನಿ) ರವರು ರ್‍ಯಾಲಿಯ ಪದಕವನ್ನು ಆಕಾಶದಲ್ಲಿ ಹಾರಿಬಿಡುವ ಮೂಲಕ ರ್‍ಯಾಲಿಗೆ ಚಾಲನೆ ನೀಡಿದರು, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲ ಚಂದ್ರಶೇಖರ್‌ರವರು ರ್‍ಯಾಲಿಯ ಧ್ವಜಾರೋಹಣವನ್ನು ನೆರವೇರಿಸಿದರು, ಡಾ|| ಧನಂಜಯ ಸರ್ಜಿ, ಮಾನ್ಯ ಶಾಸಕರು, ವಿಧಾನ ಪರಿಷತ್ ಇವರು ರ್‍ಯಾಲಿಯನ್ನು ಅಧಿಕೃತವಾಗಿ ಉದ್ಘಾಟಿಸಿದರು, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಭಾ.ಸ್ಕೌ.ಗೈ ಇವರು ರ್‍ಯಾಲಿ ಕೈಪಿಡಿಯನ್ನು ಉದ್ಘಾಟಿಸಿ, ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು, ಶ್ರೀ ಎಂ. ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್) ಇವರು ರ್‍ಯಾಲಿಯ ಗೀತೆಯ ಆಡಿಯೋ ಬಿಡುಗಡೆಗೊಳಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀಮತಿ ಸರಸ್ವತಿ ನಾಗರಾಜ್, ಜಿಲ್ಲಾ ಆಯುಕ್ತರು (ವ.ಸಂ.), ಶ್ರೀ ಬಿ.ಸಿ. ವೇಣುಗೋಪಾಲ್, ಜಿಲ್ಲಾ ಆಯುಕ್ತರು (ವ.ಸಂ), ಜಿಲ್ಲಾ ಕೋಶಾಧಿಕಾರಿ ಶ್ರೀ ಚೂಡಾಮಣಿ ಈ ಪವಾರ್, ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಜಿ. ವಿಜಯಕುಮಾರ್ ಉಪಸ್ಥಿತರಿದ್ದರು. ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋ) ಪ್ರಾಸ್ತಾವಿಕ ನುಡಿ ನುಡಿದರು. ಜಿಲ್ಲಾ ಆಯುಕ್ತರು (ಸ್ಕೌ) ಶ್ರೀ ಎಸ್.ಜಿ. ಆನಂದ್‌ರವರು ಸ್ವಾಗತಿಸಿದರು. ಜಿಲ್ಲಾ ತರಬೇತಿ ಆಯಕ್ತರು(ಗೈ) ಶ್ರೀಮತಿ ಗೀತಾ ಚಿಕ್ಕಮಠ್‌ರವರು ರ್‍ಯಾಲಿಯ ವರದಿಯನ್ನು ಓದಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ.ವಿ. ಚಂದ್ರಶೇಖರಯ್ಯರವರು ವಂದನಾರ್ಪಣೆ ನೆರವೇರಿಸಿದರು. ಶ್ರೀ ಎ.ವಿ. ರಾಜೇಶ್, ಎಲ್.ಟಿ. (ರೋವರ್)ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಮೇ 27 ರಂದು ಮಧ್ಯಾಹ್ನ 2 ಗಂಟೆಗೆ Skill-o-Rama ಕಾರ್ಯಕ್ರಮವನ್ನು ಶ್ರೀಮತಿ ಡಾ|| ಸೋನಿಯಾ ಭಾತ್ರ ಅಮಿತ್ ಕುಮಾರ್, ಕೇಂದ್ರ ಸ್ಥಾನಿಕ ಆಯುಕ್ತರು (ಬು–ಬುಲ್)ರವರು ಉದ್ಘಾಟಿಸಿದರು. ಮೇ 27 ಸಂಜೆ 4.00 ಗಂಟೆಗೆ ಪಥಸಂಚಲನ ಕಾರ್ಯಕ್ರಮವನ್ನು ಶ್ರೀ ಬಾಬು ಆಂಜನಪ್ಪ, ಡಿ.ವೈ.ಎಸ್.ಪಿ. ಶಿವಮೊಗ್ಗ ಇವರು ಉದ್ಘಾಟಿಸಿದರು. ಶ್ರೀ ಚಂದ್ರಪ್ಪ ಎಸ್. ಗುಂಡಪಲ್ಲಿ ಉಪನಿರ್ದೇಶಕರು (ಪದವಿಪೂರ್ವ ಶಿಕ್ಷಣ) ಶಿವಮೊಗ್ಗ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮೇ 27 ಸಂಜೆ 7.00 ಗಂಟೆಗೆ ಪೇಜೆಂಟ್ ಶೋ ಕಾರ್ಯಕ್ರಮವನ್ನು ಶ್ರೀ ಎಸ್. ರುದ್ರೇಗೌಡ, ಮಾಜಿ ಶಾಸಕರು, ವಿಧಾನ ಪರಿಷತ್‌ರವರು ಉದ್ಘಾಟಿಸಿದರು.





ಮೇ 28 ರಂದು ಬೆಳಗ್ಗೆ 7.30 ಗಂಟೆಗೆ ರ್‍ಯಾಲಿಯ ಎಲ್ಲಾ ಮಕ್ಕಳು ಹಾಗೂ ಶಿಕ್ಷಕರನ್ನು ಮಲೆಶಂಕರ ವನ್ಯಧಾಮಕ್ಕೆ ಚಾರಣ ಹಾಗೂ ಪರಿಸರ ಚಟುವಟಿಕೆ ಕಾರ್ಯಕ್ರಮಗಳಿಗೆ ಬಸ್ ಮುಖಾಂತರ ಕರೆದೊಯ್ಯಲಾಯಿತು. ಎಲ್ಲಾ ಶಿಬಿರಾರ್ಥಿಗಳು ವನ್ಯಧಾಮದಲ್ಲಿ 4 ಕಿ.ಮೀ. ದೂರ ಚಾರಣದ ಮೂಲಕ ಮಲೆಶಂಕರವನ್ನು ತಲುಪಿದರು. ಮಲೆಶಂಕರ ವನ್ಯಧಾಮದಲ್ಲಿ ಶಿಬಿರಾರ್ಥಿಗಳಿಗೆ ರೈಫಲ್ ಶೂಟಿಂಗ್, ಆರ್ಚರಿ, ಸಾಹಸ ಚಟುವಟಿಕೆಗಳು, ಬೆಂಕಿಯಿಂದ ಅಡುಗೆ ತಯಾರಿಸುವುದು, ಮೂಲಕ ಚಟುವಟಿಕೆಗಳನ್ನು ನಡೆಸಲಾಯಿತು. ಅರಣ್ಯಾಧಿಕಾರಿಗಳು, ವನ್ಯಜೀವಿ ಹಾಗೂ ಪರಿಸರದ ಬಗ್ಗೆ ಮಾಹಿತಿ ನೀಡಿದರು. ಮಧ್ಯಾಹ್ನ ಊಟದ ನಂತರ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸಲಾಗಿತ್ತು. ಮೇ 28 ಸಂಜೆ 07 ಗಂಟೆಗೆ ಭವ್ಯ ಶಿಬಿರಾಗ್ನಿ ಕಾರ್ಯಕ್ರಮವನ್ನು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಬೆಂಗಳೂರು, ರವರು ಉದ್ಘಾಟಿಸಿದರು.

ಮೇ 29 ರಂದು ಬೆಳಗ್ಗೆ 07 ಗಂಟೆಗೆ "ಸರ್ವಧರ್ಮ ಪ್ರಾರ್ಥನೆ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬೆಳಗ್ಗೆ 10 ಗಂಟೆಗೆ ಸಾಹಸ ಚಟುವಟಿಕೆಗಳ ಕಾರ್ಯಕ್ರಮವನ್ನು ಶ್ರೀಮತಿ ಕುಮಾರಿಹೊನ್ನಮ್ಮ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು(ಪರೀಕ್ಷಾ ವಿಭಾಗ) ರಾಜ್ಯ ಸಂಸ್ಥೆ ಇವರು ರೈಫೆಲ್ ಶೂಟಿಂಗ್ ಮುಖಾಂತರ ಉದ್ಘಾಟಿಸಿದರು. ಹಿರಿಯ ಸ್ಕೌಟರ್ ಶ್ರೀ ಎನ್.ಆರ್. ಪ್ರಕಾಶ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಬೆಳಗ್ಗೆ 11 ಗಂಟೆಗೆ ಶಿಬಿರಾರ್ಥಿಗಳಿಗೆ "ಯೂತ್ ಫೋರಂ" ಕಾರ್ಯಕ್ರಮವನ್ನು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು(ಗೈಡ್) ಇವರು ನೆರವೇರಿಸಿದರು. ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ಶ್ರೀಮತಿ ಕೆ.ವಿ. ಶ್ಯಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್) ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಕೆ. ಪಾಲ್‌ಕುಮಾರ್ MOG ಸಂಸ್ಥಾಪಕ ಸದಸ್ಯರು ಹಾಗೂ ವಕೀಲರು ಉಪಸ್ಥಿತರಿದ್ದರು. ಮಧ್ಯಾಹ್ನ 02 ಗಂಟೆಗೆ ಮುಕ್ತದಳಗಳ ನಾಯಕರುಗಳೊಂದಿಗೆ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರು ಇವರು ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮುಕ್ತದಳಗಳ ಬೆಳವಣಿಗೆ ಹಾಗೂ ವಿಸ್ತರಣೆಗೆ ಸಲಹೆ ಮತ್ತು ಮಾರ್ಗದರ್ಶನ ನೀಡಿದರು. ಮೇ 29ರ ಮಧ್ಯಾಹ್ನ 02 ಗಂಟೆಗೆ L.E.D ದೃಶ್ಯ ಮಾಧ್ಯಮ ಮುಖಾಂತರ ಆಕರ್ಷಕವಾದ ಕ್ವಿಜ್ ಕಾರ್ಯಕ್ರಮವನ್ನು ಶ್ರೀ ಎಸ್.ಟಿ. ಶ್ರೀನಿವಾಸ್ ವರ್ಮ, ಸಹಾಯಕ ಜಿಲ್ಲಾ ಆಯುಕ್ತರು ಶಿವಮೊಗ್ಗರವರು ನೆರವೇರಿಸಿ ಕೊಟ್ಟರು.

ಮೇ 29ರ ಮಧ್ಯಾಹ್ನ 3.30ಕ್ಕೆ ಸಮಾರೋಪ ಕಾರ್ಯಕ್ರಮ ನೆರವೇರಿತು. ಸ್ಕೌಟ್ಸ್–ಗೈಡ್ಸ್ ಪ್ರಾರ್ಥನೆಯೊಂದಿಗೆ ಸಮಾರೋಪ ಸಮಾರಂಭ ಪ್ರಾರಂಭವಾಗಿ ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋವರ್) ಸ್ವಾಗತಿಸಿದರು. ಶ್ರೀ ಹೆಚ್. ಶಿವಶಂಕರಪ್ಪ, D.T.C (ಸ್ಕೌಟ್)ರವರು ರ್‍ಯಾಲಿಯ ವರದಿಯನ್ನು ಮಂಡಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ವಿಧಾನ ಪರಿಷತ್ತ ಶಾಸಕರಾದ ಶ್ರೀ ಆರ್. ಪ್ರಸನ್ನ ಕುಮಾರ್‌ರವರು ಭಾಗವಹಿಸಿ ಮಕ್ಕಳಿಗೆ ಹಿತವಚನ ನೀಡಿ, ಸ್ಕೌಟ್–ಗೈಡ್ ಕಾರ್ಯಕ್ರಮಗಳಿಗೆ ಸ್ಪಂದಿಸಿ ಸಹಕಾರ ನೀಡುವುದಾಗಿ ಮನವರಿಕೆ ಮಾಡಿದರು. ಶ್ರೀ ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು ಇವರು ಸಮಾರೋಪ ಭಾಷಣ ಮಾಡುತ್ತಾ ಮುಕ್ತದಳಗಳ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಸಮಾಜಮುಖಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಾಜ್ಯಾದ್ಯಂತ ಮುಕ್ತದಳಗಳನ್ನು ವಿಸ್ತರಿಸಿ ಬಲಪಡಿಸಿ ರಾಜ್ಯ ಸ್ಕೌಟ್ ಗೈಡ್ ಚಳುವಳಿಯ ಬೆಳವಣಿಗೆಗೆ ಪೂರಕವಾಗಿ ಸ್ಪಂದಿಸಿ, ಮಕ್ಕಳಲ್ಲಿ ನಾಯಕತ್ವ ಗುಣಗಳನ್ನು ಹಾಗೂ ಸೇವಾ ಮನೋಭಾವನೆಯನ್ನು ಮೈಗೂಡಿಸಿಕೊಂಡು ರಾಜ್ಯ ಮತ್ತು ರಾಷ್ಟ್ರದ ಬೆಳವಣಿಗೆಗೆ ಪೂರಕವಾಗಿರಬೇಕೆಂದು ಮಕ್ಕಳಿಗೆ ಹಿತವಚನ ನೀಡಿದರು.

ಸಮಾರೋಪ ಸಮಾರಂಭ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲ ಚಂದ್ರಶೇಖರ್ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ಎಸ್.ಜಿ. ಆನಂದ್, ಶಿಬಿರದ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಹೆಚ್. ಶಿವಶಂಕರಪ್ಪ, ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಗೀತಾ ಚಿಕ್ಕಮಠ್, ರ್‍ಯಾಲಿಯ ಸಂಚಾಲಕರಾಗಿ ಶ್ರೀ ರಾಜೇಶ್ ಎ.ವಿ. (ಎಲ್.ಟಿ. ರೋವರ್), ರ್‍ಯಾಲಿಯ ಕಾರ್ಯದರ್ಶಿಯಾದ ಶ್ರೀ ಕೆ.ವಿ. ಚಂದ್ರಶೇಖರಯ್ಯ, ಜಿಲ್ಲಾ ಸಂಸ್ಥೆ ಕೋಶಾಧಿಕಾರಿ ಶ್ರೀ ಚೂಡಾಮಣಿ ಈ ಪವಾರ್, ಜಿಲ್ಲಾ ಸಂಸ್ಥೆಯ ಜಂಟಿ ಕಾರ್ಯದರ್ಶಿ (ಗೈಡ್) ಶ್ರೀಮತಿ ಲಕ್ಷ್ಮೀ ಕೆ. ರವಿ, ರ್‍ಯಾಲಿಯ ನಿರ್ದೇಶಕರಾದ ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು (ರೋವರ್), ರ್‍ಯಾಲಿಯ ಸಹಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ, ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಜಿ. ವಿಜಯ್‌ಕುಮಾರ ಹಾಗೂ ಇತರರು ಉಪಸ್ಥಿತರಿದ್ದರು.

ಮುಕ್ತದಳಗಳ ರ್‍ಯಾಲಿಯಲ್ಲಿ ಬೆಂಗಳೂರು ಪೂರ್ವ ಜಿಲ್ಲೆಯಿಂದ 6 ಶಿಬಿರಾರ್ಥಿಗಳು 1 ನಾಯಕರು, ದಾವಣಗೆರೆ ಜಿಲ್ಲೆಯಿಂದ 22 ಶಿಬಿರಾರ್ಥಿಗಳು 2 ನಾಯಕರು, ಗದಗ ಜಿಲ್ಲೆಯಿಂದ 9 ಶಿಬಿರಾರ್ಥಿಗಳು 4 ನಾಯಕರು, ಮಂಡ್ಯ ಜಿಲ್ಲೆಯಿಂದ 2 ಶಿಬಿರಾರ್ಥಿಗಳು 1 ನಾಯಕರು, ಮೈಸೂರು ಜಿಲ್ಲೆಯಿಂದ 65 ಶಿಬಿರಾರ್ಥಿಗಳು 13 ನಾಯಕರು, ರಾಯಚೂರು ಜಿಲ್ಲೆಯಿಂದ 1 ನಾಯಕರು, ತುಮಕೂರು ಜಿಲ್ಲೆಯಿಂದ 4 ಶಿಬಿರಾರ್ಥಿಗಳು 1 ನಾಯಕರು, ವಿಜಯನಗರ ಜಿಲ್ಲೆಯಿಂದ 21 ಶಿಬಿರಾರ್ಥಿಗಳು 3 ನಾಯಕರು, ವಿಜಯಪುರ ಜಿಲ್ಲೆಯಿಂದ 60 ಶಿಬಿರಾರ್ಥಿಗಳು 9 ನಾಯಕರು, ಬೆಂಗಳೂರು ಮುಕ್ತದಳಗಳಿಂದ 6 ಶಿಬಿರಾರ್ಥಿಗಳು 1 ನಾಯಕರು, ಒಟ್ಟು 199 ಶಿಬಿರಾರ್ಥಿಗಳು 35 ನಾಯಕರುಗಳು ಪಾಲ್ಗೊಂಡಿದ್ದರು. ಈ ರ್‍ಯಾಲಿಯ ಯಶಸ್ಸಿಗೆ ಜಿಲ್ಲೆಯ ಕೆಳಕಾಣಿಸಿದ ನಾಯಕರುಗಳು ಸಹಕರಿಸಿದರು.





# ರೋವರ್ ರೇಂಜರ್ಸ್‌ಗಳ ರಾಜ್ಯ ಮಟ್ಟದ ಕಡಲತೀರ ಚಾರಣ ಶಿಬಿರ



ಮೇ 24 ರಿಂದ 26 ರವರೆಗೆ ಕಾರವಾರ ಜಿಲ್ಲಾ ಸಂಸ್ಥೆ, ಭಟ್ಕಳ ಸ್ಥಳೀಯ ಸಂಸ್ಥೆ ಹಾಗೂ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಸಹಯೋಗದೊಂದಿಗೆ ಶ್ರೀ ದುರ್ಗಾ ಪರಮೇಶ್ವರಿ ಸಮುದಾಯ ಭವನ, ಅಳ್ವೆಕೋಡಿಯಲ್ಲಿ ರೋವರ್–ರೇಂಜರ್‌ಗಳ ರಾಜ್ಯ ಮಟ್ಟದ ಕಡಲ ತೀರ ಚಾರಣ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕ್ಯಾಂಪಿನಲ್ಲಿ ಒಟ್ಟು 16 ಜಿಲ್ಲೆಯ 63 ರೋವರ್ಸ್–ರೇಂಜರ್ಸ್, ಉಳಿದ 22 ಜನ ಸಿಬ್ಬಂದಿ, ಸರ್ವಿಸ್, ರೋವರ್ ಸ್ಕೌಟ್ ಲೀಡರ್ಸ್, ಎಲ್.ಎ. ಕಾರ್ಯದರ್ಶಿಗಳು ಸೇರಿ 85 ಮಂದಿ ಭಾಗವಹಿಸಿದ್ದರು. ಶಿಬಿರದ ನಾಯಕರಾಗಿ ಎ.ಎಸ್.ಓ.ಸಿ ಭಾರತಿ ಡಾಯಸ್‌ರವರು ಕಾರ್ಯನಿರ್ವಹಿಸಿದರು, 1ನೇ ದಿನ ಧ್ವಜಾರೋಹಣದೊಂದಿಗೆ ಪ್ರಾರಂಭವಾಗಿ ದೇವಸ್ಥಾನದ ಧರ್ಮದರ್ಶಿಗಳಾದ ಶ್ರೀ ನಾರಾಯಣ ದೈಮನೆಯವರು ಉದ್ಘಾಟನೆಯನ್ನು ನೇರವೇರಿಸಿ ಎಲ್ಲರಿಗೂ ಶುಭಕೋರಿದರು. ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಜಿ.ಜಿ. ಸಭಾಹಿತ್‌ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದೇವಾಲಯದ ಧರ್ಮದರ್ಶಿಗಳಾದ ಶ್ರೀ ಹನುಮಂತ ನಾಯಕ, ಅಧ್ಯಕ್ಷರು ಶ್ರೀ ರಾಮ ಮೊಗೇರ್‌ರವರು, ಮೀನುಗಾರಿಕೆ ಸಹಕಾರಿ ಸಂಘದ ಅಧ್ಯಕ್ಷರು ಶ್ರೀ ವಿಟ್ಠಲ್ ದೈಮನೆಯರು, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ ಭಟ್‌ರವರು, ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ, ಎಲ್.ಟಿ., ಶ್ರೀ ಬಿ.ಡಿ. ಫರ್ನಾಂಡಿಸ್, ಎಲ್.ಎ. ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಗುಬ್ಬಿ ಹಿತ್ತಲ್, ಶ್ರೀ ಅನಿಲ್ ದೇಶಭಂಡಾರಿ, ಶ್ರೀ ಎಂ.ಎನ್. ಗೌಡರವರು ಉಪಸ್ಥಿತರಿದ್ದರು. ಮಧ್ಯಾನ್ಹ ಭಟ್ಕಳ ಲೈಟ್ ಹೌಸ್, ಚೆಕ್‌ಡ್ಯಾಂ ಮುಗಿಸಿ ಅಳ್ವೆಕೋಡಿಯ ಸೀ ವಾಕ್ ಕರೆದುಕೊಂಡು ಹೋಗಲಾಯಿತು ಶಿಬಿರಾಗ್ನಿಯೊಂದಿಗೆ ದಿನ ಮುಕ್ತಾಯಗೊಂಡಿರು.

2ನೇ ದಿನ ಸ್ಕೌಟಿಂಗಿನ ನಿಯಮದಂತೆ ಕೆಲಸ ಕಾರ್ಯ ಮುಗಿಸಿ 09 ಗಂಟೆಗೆ ಅಳ್ವೆಕೋಡಿ ಕಡಲ ತೀರದಿಂದ ಮುರ್ಡೇಶ್ವರ ದೇವಸ್ಥಾನದ ವರೆಗೆ ಹಾಗೂ ದೇವಸ್ಥಾನದಿಂದ ಮತ್ತೆ ತಂಗುವ ಸ್ಥಳಕ್ಕೆ ಒಟ್ಟು 16 ಕಿ.ಮೀ. ಚಾರಣ ಮಾಡಿದರು. ಮದ್ಯದಲ್ಲಿ ಮಜ್ಜಿಗೆ, ಜ್ಯೂಸ್ ನೀಡಲಾಯಿತು. ಕರಾವಳಿ ಕಾವಲು ಪೋಲಿಸ್ ಹಾಗೂ ಗ್ರಾಮಾಂತರ ಪೋಲಿಸ ಠಾಣೆಯ ಪೋಲಿಸ್‌ಗಳು ಸುರಕ್ಷತೆಗಾಗಿ ಕಾರ್ಯನಿರ್ವಹಿಸಿದರು.

3ನೇ ದಿನ ಸ್ಕೌಟಿಂಗಿನ ನಿಯಮದಂತೆ ಕೆಲಸ ಕಾರ್ಯ ಮುಗಿಸಿ ದೇವಸ್ಥಾನದ ಆವರಣವನ್ನು ಸ್ವಚ್ಚತೆಗೊಳಿಸಿದ ನಂತರ ಅಗ್ನಿ ಶಾಮಕ ದಳದವರು ಅಗ್ನಿ ನಂದಿಸುವ ಬಗೆಯನ್ನು ಹಾಗೂ ಹರಡುವ ಬಗ್ಗೆ ಮಾಹಿತಿಯನ್ನು ಕೊಟ್ಟು ನಂದಿಸುವ ಬಗೆಯನ್ನು ಪ್ರಾತ್ಯಕ್ಷಿಕವಾಗಿ ಮಾಡಿ ತೋರಿಸಿದರು. ಅಗ್ನಿ ಶಾಮಕ ದಳದ ಅಧಿಕಾರಿ ಶ್ರೀ ಮಹಮದ್ ಶಾಫಿ ಮುಗಲ್, ಪ್ರಮುಖ ಅಗ್ನಿಶಾಮಕ ಶ್ರೀ ಗಜಾನನ್ ದೇವಾಡಿಗ, ಅಗ್ನಿಶಾಮಕ ಶ್ರೀ ಕುಮಾರ ನಾಯ್ಕ ಹಾಗೂ ಅವರ ಸಿಬ್ಬಂದಿ ವರ್ಗದವರಿದ್ದರು. ತದನಂತರ ಕರಾವಳಿ ಕಾವಲು ಪೋಲಿಸ್‌ರವರು ಪಿ.ಐ. ಶ್ರೀ ಕುಸುಮಾಧರ್‌ರವರ ಮಾರ್ಗದರ್ಶನದಂತೆ ಪಿ.ಎಸ್.ಐ. ವೀಣಾ ಚಿತ್ರಾಪುರ, ಎ.ಎಸ್.ಐ. ಶ್ರೀ ರಮೇಶ ಪಟಗಾರ ಸಿಬ್ಬಂದಿ ಶ್ರೀ ಮಂಜುನಾಥರವರು ಸಮುದ್ರ ಮೂಲಕ ನಡೆದ ದಾಳಿಯ ಬಗ್ಗೆ ವಿವರಣೆಯನ್ನು ನೀಡಿ ಯಾವ ಮುಖಾಂತರ ಬಂದು ದಾಳಿ ಮಾಡಬಹುದು ಅದರಿಂದ ನಾವು ಹೇಗೆ ಎಚ್ಚರಿಗೆ ವಹಿಸಬೇಕು, ಸಮುದ್ರದ ಬಗ್ಗೆ ಮಾಹಿತಿ ಅದರಿಂದ ನಮಗೆ ಬರುವ ಲಾಭ, ಮೀನುಗಾರರ ಜೀವನ, ಹಡಗು ಹಾಗೂ ಬೋಟ್ ಬಗ್ಗೆ ಮಾಹಿತಿಯನ್ನು ಪಿಪಿಟಿ ಮೂಲಕ ತೋರಿಸಿ ವಿವರಿಸಿದರು. ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಜಿ.ಜಿ. ಸಭಾಹಿತ್‌ರವರು ವಹಿಸಿ ಎಲ್ಲರಿಗೂ ಧನ್ಯವಾದ ತಿಳಿಸಿ ಶುಭಕೋರಿದರು. ಮುಖ್ಯ ಅತಿಥಿಯಾಗಿ ದೇವಸ್ಥಾನದ ವ್ಯವಸ್ಥಾಪಕರಾದ ರಾಜು ಮೊಗೇರ್‌ರವರು ಬಂದಿದ್ದು, ಶಿಬಿರದ ನಾಯಕಿ ಶ್ರೀಮತಿ ಭಾರತಿ ಡಾಯಸ್‌ರವರು ವರದಿ ಮಂಡಿಸಿ ಕಾರ್ಯಕ್ರಮ ನಿರೂಪಿಸಿದರು. ಸಹ ನಾಯಕರಾಗಿರುವ ಶ್ರೀ ವೀರೇಶ್ ಮಾದರ್‌ರವರು ಪ್ರಮಾಣ ಪತ್ರವನ್ನು ವಿತರಿಸಿದರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರರವರು, ವಂದನೆಯನ್ನು ಖಜಾಂಚಿ ಶ್ರೀ ಜಿ.ಆರ್. ಮಡಿವಾಳರವರು ನಿರ್ವಹಿಸಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಸ್ಕೌಟರ್ಸ್–ಗೈಡರ್ಸ್‌ಗಳು ಉಪಸ್ಥಿತರಿದ್ದರು. ರೋವರ್ಸ್–ರೇಂಜರ್ಸ್‌ಗಳು ಅನಿಸಿಕೆಯನ್ನು ವ್ಯಕ್ತಪಡಿಸಿದರು. ಕೊನೆಯಲ್ಲಿ ಧ್ವಜ ಆವರೋಹಣ ಮಾಡುವುದರ ಮೂಲಕ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

# ರಾಜ್ಯ ಸಂಸ್ಥೆಯಿಂದ ಜರುಗಿದ ವಿವಿಧ ಕಾರ್ಯಕ್ರಮಗಳು



* ಜೂನ್ 04, 2025 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ರಾಜಭವನದಲ್ಲಿ ಭೇಟಿ ಮಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆ ಮತ್ತು ಅಭಿವೃದ್ಧಿ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಎಸ್.ಪಿ. ಸುಳ್ಳದ್, ಶ್ರೀ ಎಂ.ಎ. ಚೆಲ್ಲಯ್ಯ, ಶ್ರೀ ಕೆ.ಹೆಚ್. ಜಯರಾಮಯ್ಯ ಉಪಸ್ಥಿತರಿದ್ದರು.



* ಜೂನ್ 05 ರಂದು ರಾಜ್ಯ ಕೇಂದ್ರ ಕಚೇರಿ, ಬೆಂಗಳೂರು ಇಲ್ಲಿ ಪರಿಸರ ದಿನಾಚರಣೆಯ ಪ್ರಯುಕ್ತ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಬಿ.ಆರ್. ಪಾಟೀಲ್, ಮಾನ್ಯ ಶಾಸಕರು ಹಾಗು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ ಇವರು ಗಿಡ ನೆಟ್ಟು ಪರಿಸರ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಸಹಾಯಕ ರಾಜ್ಯ ಆಯುಕ್ತರು, ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀಮತಿ ರಾಮಲತಾ, ರಾಜ್ಯ ಆಯುಕ್ತರು ವಯಸ್ಕ ಸಂಪನ್ಮೂಲ, ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ಕಾರ್ಯದರ್ಶಿ, ಶ್ರೀ ಎಂ. ಎ. ಚೆಲ್ಲಯ್ಯ ಹಾಗೂ ಇತರ ಪದಾಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



* ಜೂನ್ 21 ರಂದು ವಿಧಾನಸೌಧ ಮುಂಭಾಗದಲ್ಲಿ ಆಯೋಜಿಸಲಾಗಿದ್ದ ಅಂತಾರಾಷ್ಟ್ರೀಯ 11ನೇ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ ಇವರ ಆಹ್ವಾನದ ಮೇರೆಗೆ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಹಾಗೂ ಬಿ.ಬಿ.ಎಂ.ಪಿ ಜಿಲ್ಲೆಗಳಿಂದ 600 ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ದಳನಾಯಕರು ಭಾಗವಹಿಸಿ ಯೋಗದ ಮಹತ್ವವನ್ನು ತಿಳಿದರು. ಶ್ರೀ ನಿತಿನ್ ಅಮೀನ್, ಎ.ಎಸ್.ಓ.ಸಿ ಬೆಂಗಳೂರು ಉತ್ತರ ಜಿಲ್ಲೆ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು.



* ರಾಜ್ಯ ಸಂಸ್ಥೆ ಹಾಗು ಬಿಬಿಸಿ ಮೀಡಿಯಾ ಆಕ್ಷನ್ ವತಿಯಿಂದ ಹಮ್ಮಿಕೊಂಡಿದ್ದ ಟೆಕ್ಸ್‌ಟೈಲ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಾರ್ಯಕ್ರಮಕ್ಕೆ ಬಿಬಿಸಿ ಆಕ್ಷನ್ ಮೀಡಿಯಾದ ಭಾರತದ ನಿರ್ದೇಶಕರಾದ ಶ್ರೀಮತಿ ವರಿಂಧರ್ ಗಂಭೀರ್ ರವರು ಚಾಲನೆ ನೀಡಿದರು. ವಿದ್ಯಾರ್ಥಿಗಳಿಗೆ ಬಳಸಲಾದ ಬಟ್ಟೆಗಳ ಮರು ಬಳಕೆ ಕುರಿತು ಮಾಹಿತಿ ನೀಡಲಾಯಿತು.

ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿ ಬಳಸಲಾಗದ ಬಟ್ಟೆಗಳನ್ನು ಚೆನ್ನಾಗಿ ತೊಳೆದು ಅವುಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿಗೆ ತಂದು



ಕೊಡಿ ಇದನ್ನು ನಾವು ಮರು ಬಳಸುತ್ತೇವೆ, ಇದೊಂದು ಉತ್ತಮ ಕಾರ್ಯಕ್ರಮವಾಗಿದೆ. ಇನ್ನೂ ಅನೇಕ ಕಾರ್ಯಕ್ರಮಗಳನ್ನು ಸ್ಕೌಟ್ ಮತ್ತು ಗೈಡ್‌ನಿಂದ ಹಮ್ಮಿಕೊಳ್ಳಲಾಗಿದೆ. ಹಳೆಯ ಬಟ್ಟೆಗಳನ್ನು ಬಳಸಬಾರದು ಎಂಬ ಮೂಢನಂಬಿಕೆಯಿಂದ ಹೊರಬರಬೇಕು ಎಂದು ಹೇಳಿದರು. ಡಾ. ರೀತು ಗಂಜಿಗಟ್ಟಿ ಹಳೆಯ ಬಟ್ಟೆಗಳ ಮರು ಬಳಕೆ ಕುರಿತು ನಡೆಸುತ್ತಿರುವ ಆಂದೋಲನದ ಬಗ್ಗೆ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಆಯುಕ್ತರಾದ ಶ್ರೀಮತಿ ಬಿ.ವಿ. ರಾಮಲತಾ, ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಹಾಗೂ ಮತ್ತಿತರರು ಭಾಗವಹಿಸಿದ್ದರು.



* ಜೂನ್ 12 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ವಿಶ್ವೇಶ್ವರಯ್ಯ ತಾಂತ್ರಿಕ ಮಹಾ ವಿದ್ಯಾಲಯದ ಮಾನ್ಯ ಉಪ ಕುಲಪತಿಗಳಾದ ಡಾ॥ ಎನ್. ವಿದ್ಯಾಶಂಕರ್ ಅವರನ್ನು ಭೇಟಿ ಮಾಡಿ, VTU ವ್ಯಾಪ್ತಿಗೆ ಬರುವ ಎಲ್ಲ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಪ್ರಾರಂಭಿಸಲು ಆದೇಶಿಸಬೇಕೆಂದು ಮನವಿ ಮಾಡಲಾಯಿತು.

ರಾಜ್ಯ ಸಂಘಟನಾ ಆಯುಕ್ತರುಗಳಾದ ಶ್ರೀ ಎಂ. ಪ್ರಭಾಕರ್‌ಭಟ್, ಶ್ರೀಮತಿ ಸಿ. ಮಂಜುಳಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## State Level Service Camp of Rovers

**State Level Service Camp of Rovers was held at Dr. Annie Besant Scouts and Guides State Training and Camping Centre, Doddaballapura, Bengaluru Rural District from 17th to 21st June 2025.**

**5 Rovers from Government Pre-University College, Gowribidanur, 5 Rovers from Government First Grade College, Sira, 3 Rovers from Government First Grade College, Tumakuru, 1 Rover from Ekalavya Open Rover Crew participated in the Camp and cleaned the important areas in the Campus.**

**Sri Girish, Rover Scout Leader was the Leader of the Camp, assisted by Sri Kumaraswamy, Rover Scout Leader and Smt. Kanchanamala, Guide Captain. Sri M.A. Chellaiah, Convenor Cum Camp Co-ordinator Co-ordinated the event.**














## ಅಭಿನಂದನೆಗಳು



ಶ್ರೀಮತಿ ಜಯಶ್ರೀ

ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗ ಅಸೋಸಿಯೇಷನ್(ರಿ.) ಇವರು ಜೂನ್ 01, 2025ರಂದು ನಡೆಸಿದ ರಾಜ್ಯ ಯೋಗಾಸನ ತೀರ್ಪುಗಾರರ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಗೈಡರ್ಸ್ ಹಾಗೂ ದೈಹಿಕ ಶಿಕ್ಷಣ ಶಿಕ್ಷಕಿಯರಾದ **ಶ್ರೀಮತಿ ಜಯಶ್ರೀ,** ಸರಕಾರಿ ಪ್ರೌಢಶಾಲೆ, ಕಿನ್ನಿಕಂಬಳ ಹಾಗೂ **ಶ್ರೀಮತಿ ನಯನ** ನಿತ್ಯಾಧರ್ ಪ್ರೌಢಶಾಲೆ, ಪೆರ್ಮನ್ನೂರು ಇವರುಗಳು ತೇರ್ಗಡೆ ಹೊಂದಿ ಗೌರವಕ್ಕೆ ಪಾತ್ರರಾಗಿರುತ್ತಾರೆ.



ಶ್ರೀಮತಿ ನಯನ

# ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಪ್ರತಿಭಾವಂತ ಸ್ಕೌಟ್ಸ್-ಗೈಡ್ಸ್‌ಗಳಿಗೆ
# ಅಭಿನಂದನಾ ಸಮಾರಂಭ



2025ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ 2000 ಸ್ಕೌಟ್ಸ್–ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳು ಶೇಕಡ 90%ಕಿಂತಲೂ ಹೆಚ್ಚು ಅಂಕ ಗಳಿಸಿರುತ್ತಾರೆ. 80 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿರುತ್ತಾರೆ. ಇವರುಗಳಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, ಉಡುಪಿ ಜಿಲ್ಲಾ ಸಂಸ್ಥೆ ಹಾಗೂ ಪರ್ಯಾಯ ಪುತ್ತಿಗೆ ಮಠದ ಸಹಕಾರದಲ್ಲಿ ಮೇ 30 ರಂದು ಉಡುಪಿ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ಪರ್ಯಾಯ ಪುತ್ತಿಗೆ ಮಠ, ಶ್ರೀ ಕೃಷ್ಣ ಮಠ ಉಡುಪಿ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ವಿದ್ಯಾರ್ಥಿಗಳು ಸ್ಮರಣ ಶಕ್ತಿ ಹೆಚ್ಚಿಸಿಕೊಂಡು ಅಂಕಗಳನ್ನು ಜಾಸ್ತಿ ತೆಗೆದುಕೊಂಡರಷ್ಟೇ ಸಾಧನೆಯಾಗದು, ಸಾಧನೆ ಪರಿಪೂರ್ಣವಾಗಬೇಕಾದರೆ ಸೇವಾಮತಿಗಳಾಗಬೇಕು. ಸೇವಾ ಮನೋಭಾವವೇ ನಿಜವಾದ ಶಿಕ್ಷಣ ಎಂದು ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಶ್ರೀಪಾದರು ಆಶೀರ್ವಚನ ನೀಡಿದರು. ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅಪೂರ್ವ ಸಾಧನೆ ಮಾಡಿದ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳನ್ನು ಸನ್ಮಾನಿಸಿದರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪರ್ಯಾಯ ಪುತ್ತಿಗೆ ಮಠದ ಕಿರಿಯ ಯತಿ ಶ್ರೀ ಸುಶ್ರೀಂದ್ರತೀರ್ಥ ಶ್ರೀಪಾದರು, ಮಾನ್ಯ ಶಾಸಕರಾದ ಶ್ರೀ ಯಶಪಾಲ್. ಎ, ಸುವರ್ಣ, ಅಪರ ಜಿಲ್ಲಾಧಿಕಾರಿ ಶ್ರೀ ಅಬೀದ್ ಗದ್ಯಾಳ, ಮಾಜಿ ಸಚಿವರಾದ ಶ್ರೀ ಪ್ರಮೋದ ಮಧ್ವರಾಜ್, ಪುತ್ತಿಗೆ ಮಠದ ಅಂತರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಪ್ರಸನ್ನ ಆಚಾರ್ಯ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಶ್ರೀ ಗಣಪತಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ಶ್ರೀ ಮಾರುತಿ, ಡಯಟ್ ಪ್ರಾಂಶುಪಾಲರಾದ ಡಾ. ಅಶೋಕ್ ಕಾಮತ್‌ರವರು ಭಾಗವಹಿಸಿದ್ದರು.

ಉಡುಪಿ ಜಿಲ್ಲಾ ಸಂಸ್ಥೆ ಮುಖ್ಯ ಆಯುಕ್ತರಾದ ಶ್ರೀ ಜಯಕರ ಶೆಟ್ಟಿ ಇಂದ್ರಾಳಿರವರು ಸ್ವಾಗತಿಸಿದರು. ರಾಜ್ಯ ಸಂಘಟನಾ ಆಯುಕರು (ಗೈಡ್ಸ್) ಶ್ರೀಮತಿ ಸಿ. ಮಂಜುಳರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಸಂಘಟನಾ ಆಯುಕ್ತ (ಸ್ಕೌ) ಶ್ರೀ ಎಂ. ಪ್ರಭಾಕರ್ ಭಟ್‌ರವರು ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಸ್ಕೌಟ್ಸ್ ಆಯುಕ್ತರಾದ ಶ್ರೀ ಜನಾರ್ಧನ ಕೊಡವೂರು ವಂದಿಸಿದರು. ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ಜ್ಯೋತಿ ಕೆ. ಪೈ, ಜಿಲ್ಲಾ ಕೋಶಾಧಿಕಾರಿ ಶ್ರೀ ಹರಿಪ್ರಸಾದ್ ರೈ, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ ಅಡಿಗ ಮತ್ತು ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಶ್ರೀಮತಿ ಸುಮನಾ ಶೇಖರ್‌ರವರು, ಹಾಗೂ ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.





# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಜಿಲ್ಲಾ ಸಂಸ್ಥೆ ಬಾಗಲಕೋಟೆ ಸ್ಥಳೀಯ ಸಂಸ್ಥೆ ಜಮಖಂಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಿಪ್ಪರಗಿ ಇವರ ಸಂಯುಕ್ತಾಶ್ರಯದಲ್ಲಿ ಜೂನ್ 02 ರಿಂದ 08ರ ವರೆಗೆ ಮುರಾರ್ಜಿ ದೇಸಾಯಿ ವಸತಿ ಶಾಲೆ ಹಿಪ್ಪರಗಿಯಲ್ಲಿ ಜಮಖಂಡಿ ತಾಲ್ಲೂಕಿನ ಸ್ಕೌಟ್ ಮಾಸ್ಟರ್ ಗೈಡ್ ಕ್ಯಾಪ್ಟನ್‌ರವರ ಮೂಲ ತರಬೇತಿ ಶಿಬಿರವನ್ನು ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರಾದ ಶ್ರೀ ಹೆಚ್.ಜಿ. ಮಿರ್ಜಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ.ಕೆ. ಬಸಣ್ಣವರ, ತಾಲ್ಲೂಕು ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀಮತಿ ಪಂಚಾಕ್ಷರಿ ನಂದೀಶ್, ಶಾಲೆಯ ಪ್ರಾಂಶುಪಾಲರಾದ ಶ್ರೀ ಸಿದ್ಧಲಿಂಗ ದೇಮಣ್ಣವರ್, ವಿಷಯ ಪರೀವೀಕ್ಷಕರಾದ ಶ್ರೀ ಹಾಲ್ವರ್, ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ದಳವಾಯಿ, ಸ್ಕೌಟ್ ವಿಭಾಗದ ನಾಯಕರಾದ ಶ್ರೀ ಜಗದೀಶ್ ಬೋಳಸೂರ್ ಎ.ಎಲ್.ಟಿ.(ಎಸ್), ಶ್ರೀ ಎಸ್.ಬಿ. ಭಜಂತ್ರಿ ಎಲ್.ಟಿ.(ಎಸ್), ಶ್ರೀ ಸಂಗಯ್ಯ ಮಠಪತಿ ಎ.ಎಲ್.ಟಿ.(ಎಸ್), ತಾಲ್ಲೂಕು ಕಾರ್ಯದರ್ಶಿಗಳಾದ ಶ್ರೀ ಮಹಾವೀರ್ ಜಮಖಂಡಿ, ಶ್ರೀ ಹೆಚ್.ವೈ. ಆಲಮೇಲ, ನೌಕರರ ವಿವಿಧ ಸಂಘಟನೆಯ ಪದಾಧಿಕಾರಿಗಳು ಸಸಿಗೆ ನೀರು ಉಣಿಸುವ ಮೂಲಕ ಉದ್ಘಾಟಿಸಿದರು. ಸಹನಾಯಕರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.



## ಬಿ.ಬಿ.ಎಂ.ಪಿ. ಬೆಂಗಳೂರು

* ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ನಡೆದ ವಿಶ್ವ ಪರಿಸರ ದಿನಾಚರಣೆಯಲ್ಲಿ ಬಿಬಿಎಂಪಿ ಜಿಲ್ಲಾ ಸಂಸ್ಥೆಯ ಸ್ಕೌಟ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು.




## ಬೆಳಗಾವಿ

* ಜೂನ್ 05 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬೈಲಹೊಂಗಲ ಮತ್ತು ಸ್ಥಳೀಯ ಸಂಸ್ಥೆ ಬೈಲಹೊಂಗಲ ಇದರ ಅಡಿಯಲ್ಲಿ ತಾಲೂಕ ಹಂತದ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಪಟ್ಟಣದ ಲಿಟಲ್ ಹಾರ್ಟ್ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕ್ಷೇತ್ರ ಸಮನ್ವಯ ಅಧಿಕಾರಿಗಳು ಶ್ರೀ ಬಿ.ಎನ್. ಕಸಾಳೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸ್ಕೌಟ್ ಮತ್ತು ಗೈಡ್ಸ್‌ಗಳೊಂದಿಗೆ ಸಾಂಕೇತಿಕವಾಗಿ ಮಾವಿನ ಸಸಿಯನ್ನು ನೆಡುವುದರ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಅಜ್ಜಪ್ಪ ಅಂಗಡಿಯವರು ಮಾತನಾಡಿ "ತಾಯಿಯ ಹೆಸರಿನಲ್ಲಿ ಒಂದೊಂದು ಸಸ್ಯವನ್ನು ನೆಡಬೇಕು ಮತ್ತು ಅದು ದೊಡ್ಡದಾಗಿ ಫಲವನ್ನು ಕೊಡುವಂತೆ ನೋಡಿಕೊಳ್ಳಬೇಕೆಂದು ಹೇಳಿದರು. ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀ ಮುತ್ನಳಿಯವರು ಮಾತನಾಡಿ ಡೆಂಗು ಹರಡದಂತೆ ನಾವು ಏನು ಮಾಡಬೇಕು? ಡೆಂಗು ರೋಗದ ಲಕ್ಷಣ ಪರಿಹಾರೋಪಾಯ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀಮತಿ ಆಸ್ಮಾಖಾ ಜಿ. ಹಾಗೂ ಶಾಲೆಯ ಸಂಸ್ಥಾಪಕ ಶಿಕ್ಷಕಿ ಶ್ರೀಮತಿ ಶೆಲಿನ್ ಶ್ರೀ ಆಕಾಶ್‌ರವರು ಮತ್ತು ಗೈಡ್ಸ್ ಶಿಕ್ಷಕಿ ಪ್ರೇಮಾ ತಲ್ಲೂರ ವೀಣಾ ಕೌಜಲಗಿ ಇತರೆ ಎಲ್ಲ ಶಿಕ್ಷಕರು, ಶಾಲಾ ಮಕ್ಕಳು, ಸ್ಕೌಟ್ ಮತ್ತು ಗೈಡ್‌ಗಳು ಹಾಜರಿದ್ದರು. ಕು. ಗೌತಮಿ ಬಡಿಗೇರ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಿಕ್ಷಕಿ ಶ್ರೀಮತಿ ದ್ರಾಕ್ಷಾಯಿಣಿ ಕಬ್ಬೂರ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.



* ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸ್ಥಳೀಯ ಘಟಕ ಬೈಲಹೊಂಗಲ ಇದರ ಅಡಿಯಲ್ಲಿ ಬೈಲಹೊಂಗಲ ಹಾಗೂ ವಿಜಯಕಾಂತ ಡೈರಿ ಮತ್ತು ಫುಡ್ ಪ್ರಾಡಕ್ಟ ಲಿ. ನೇಗಿನಹಾಳ ಇವರ ಸಹಯೋಗದಲ್ಲಿ ತಾಲೂಕಿನ ವಿವಿಧ ಶಾಲೆಯ ಮಕ್ಕಳಿಗೆ ತಾಲೂಕ ಹಂತದಲ್ಲಿ ಪರಿಸರ ದಿನಾಚರಣೆ ನಿಮಿತ್ಯವಾಗಿ ವಿವಿದ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ.ಎನ್. ಪ್ಯಾಟಿ ಇವರು ಸಸಿಗೆ ನೀರು ಉಣಿಸುವದರ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದರು. ತಾಲೂಕಿನ ವಿವಿಧ ಶಾಲೆಗಳಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನದ ವಿದ್ಯಾರ್ಥಿಗಳು ತಾಲೂಕ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರ ಮತ್ತು ನಗದು ನೀಡುವುದರ ಮೂಲಕ ಪ್ರೋತ್ಸಾಹ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಣಾಧಿಕಾರಿಗಳ ಜೊತೆಗೆ ಸ್ಕೌಟ್ ಮತ್ತು ಗೈಡ್ ಶಿಕ್ಷಕರಾದ ಶ್ರೀ ಮಂಜುನಾಥ್ ಕಡಸಗಟ್ಟಿ, ಶ್ರೀ ಬಸವರಾಜ ಬಾಳಿಗಟ್ಟಿ, ಶ್ರೀಮತಿ ಪ್ರೇಮಾ ತಲ್ಲೂರ್, ಶ್ರೀಮತಿ ವಿದ್ಯಾ ಬರಗಾಲಿ, ಶ್ರೀಮತಿ ಅರ್ಚನಾ ಕುಲಕರ್ಣಿ, ಶ್ರೀ ಅನಿಗೋಳ

ಹಾಗೂ ಶ್ರೀ ಹಾತ್ರೋಟ ನಿರ್ಣಾಯಕರಾಗಿ ಭಾಗವಹಿಸಿದರು. ತಾಲೂಕಿನ ಶಾಲೆಗಳಿಂದ ಆಗಮಿಸಿದ ಸುಮಾರು 70 ರಿಂದ 80 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಿ.ಇ.ಓ ಕಚೇರಿಯ ಬಿ.ಆರ್.ಪಿ.ಗಳಾದ ಶ್ರೀಮತಿ ಪುಷ್ಪಾ ಶಿಂತ್ರಿ ಹಾಗೂ ಸಿ.ಆರ್.ಪಿ. ಶ್ರೀ ಗೌಡಪ್ಪ ಪಾಟೀಲ ಶ್ರೀಶೈಲ್ ಹಿರೇಮಠ, ಇ.ಸಿ.ಓ. ಶ್ರೀ ಮಹೇಶ ಯರಗಟ್ಟಿ ಹಾಜರಿದ್ದರು. ಶ್ರೀಮತಿ ಯುವರಾಣಿ ಎಸ್. ಕಾರ್ಯಕ್ರಮ ನಡೆಸಿದರು. ಶ್ರೀ ಮಂಜುನಾಥ ಕಡಸಗಟ್ಟಿ ವಂದಿಸಿದರು.



* ಕರ್ನಾಟಕ ಸರ್ಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ ಹಾಗೂ ಜಿಲ್ಲಾ ಸಂಸ್ಥೆ ಬೆಳಗಾವಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಜೂನ್ 05 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ ಆಚರಿಸಲಾಯಿತು. ಶ್ರೀ ಸಂದೀಪ್ ಪಾಟೀಲ್, ಸದಸ್ಯ ಕಾರ್ಯದರ್ಶಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿ ಇವರು ಸಸಿ ನೆಡುವುದರ ಮೂಲಕ ಪರಿಸರ ದಿನಾಚರಣೆಗೆ ಚಾಲನೆಯನ್ನು ನೀಡಿದರು. ನಂತರ ಮಕ್ಕಳಿಂದ ಪರಿಸರ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಪರಿಸರ ದಿನಾಚರಣೆಯ ಸಭಾ ಕಾರ್ಯಕ್ರಮದಲ್ಲಿ ಶ್ರೀ ರಾಜಶೇಖರ್ ಚಳಗೇರಿ ಜಿಲ್ಲಾ ಕೇಂದ್ರ ಸ್ಥಾನಿಕ ಆಯುಕ್ತರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಗೋಪಾಲಕೃಷ್ಣ ಸಣತಂಗಿ ವಲಯ ಹಿರಿಯ ಪರಿಸರ ಅಧಿಕಾರಿಗಳು, ಶ್ರೀಮತಿ ಶೋಭಾ ಪೋಳ ಪರಿಸರ ಅಧಿಕಾರಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ ಇವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು. ಶ್ರೀ ಜಿ.ಎಂ. ಪಾಟೀಲ್, ವಿಜ್ಞಾನಿಗಳು, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ ಇವರು ಹಾಜರಿದ್ದು ಮಕ್ಕಳಿಗೆ ಪರಿಸರ ಮಾಲಿನ್ಯ ಹಾಗೂ ಪ್ಲಾಸ್ಟಿಕ್‌ನ ಹಾನಿಕಾರಕ ಗುಣಗಳ ಬಗ್ಗೆ ತಿಳಿಸಿಕೊಟ್ಟರು. ಹೀರಕಪಂಕ್ ಹಾಗೂ ಚತುರ್ಥ ಚರಣ್ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಘನವೆತ್ತ ರಾಜ್ಯಪಾಲರಿಂದ ಸಹಿ ಮಾಡಿದ ಪ್ರಮಾಣ ಪತ್ರಗಳನ್ನು ಗಣ್ಯರಿಂದ ವಿತರಿಸಲಾಯಿತು. ಶ್ರೀ ಜುನೇಧಿ ಪಟೇಲ್, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು, ಬೆಳಗಾವಿ ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಶ್ರೀ ರಾಜಕುಮಾರ ಕುಂಬಾರ್ ಇವರು ನಿರೂಪಿಸಿದರು. ಕಾರ್ಯಕ್ರಮದಲ್ಲಿ ಬೆಳಗಾವಿಯ ವಿವಿಧ ಶಾಲಾ–ಕಾಲೇಜುಗಳಿಂದ ಸುಮಾರು 200 ವಿದ್ಯಾರ್ಥಿಗಳು ಹಾಜರಿದ್ದರು.



* ವಿಶ್ವ ಪರಿಸರ ದಿನಾಚರಣೆಯನ್ನು ಜೂನ್ 05 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಚಿಕ್ಕೋಡಿ, ಶಾಲಾ ಶಿಕ್ಷಣ ಇಲಾಖೆ ಚಿಕ್ಕೋಡಿ, ಹಾಗೂ ಸಾಮಾಜಿಕ ಅರಣ್ಯ ವಲಯ ಚಿಕ್ಕೋಡಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಚಿಕ್ಕೋಡಿ ನಗರದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ ಇಂದಿರಾನಗರ ಚಿಕ್ಕೋಡಿ ಇಲ್ಲಿ ಆಚರಿಸಲಾಯಿತು. ಮಾನ್ಯ ಉಪ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಚಿಕ್ಕೋಡಿ ಆದ ಶ್ರೀ ಆರ್.ಎಸ್. ಸೀತಾರಾಮು ಇವರು ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ



ನೀಡಿದರು. ನಂತರ ಸ್ಕೌಟ್–ಗೈಡ್ ಕಬ್–ಬುಲ್‌ಬುಲ್ ಹಾಗೂ ಇತರೆ ಮಕ್ಕಳಿಂದ ಪರಿಸರ ಜಾಗೃತಿ ಜಾಥಾ ನಡೆಯಿತು. ಸದರಿ ಜಾಥಾಕ್ಕೆ ಉಪ ನಿರ್ದೇಶಕರು ತಮಟೆ ಬಾರಿಸುವುದರ ಮೂಲಕ ಚಾಲನೆ ನೀಡಿದರು. ನಂತರ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ, ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಚಿಕ್ಕೋಡಿ ಶ್ರೀಮತಿ ಪ್ರಭಾವತಿ ಪಾಟೀಲ, ಚಿಕ್ಕೋಡಿಯ ಉಪ ಪರಿಸರ ಅಧಿಕಾರಿಗಳು ಶ್ರೀ ಹನುಮಂತಪ್ಪ ಹೆಚ್ ಶ್ರೀ ಎನ್.ಜಿ. ಪಾಟೀಲ, ಅಧ್ಯಕ್ಷರು ಕ.ರಾ.ಪ್ರಾ.ಶಾ. ಶಿಕ್ಷಕರ ಸಂಘ ಚಿಕ್ಕೋಡಿ, ಜಿಲ್ಲಾ ಸಂಘಟನಾ ಶಿಕ್ಷಕರು ಚಿಕ್ಕೋಡಿ, ಶ್ರೀ ಡಿ.ಆರ್. ಚಲವಾದಿ, ಪ್ರಧಾನ ಗುರುಗಳು, ಸ.ಹಿ.ಪ್ರಾ. ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ ಇಂದಿರಾ ನಗರ ಚಿಕ್ಕೋಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಗೌರವಾಧ್ಯಕ್ಷರು ಚಿಕ್ಕೋಡಿ ಶ್ರೀ ಪಿ.ಡಿ. ಮಜಲಟ್ಟಿ, ಶ್ರೀ ಆರ್.ಕೆ. ಕಾಂಬಳೆ, ಪರಿಸರ ಪ್ರೇಮಿ ಶ್ರೀ ಪ್ರದೀಪ ಮಮದಾಪುರ, ಶ್ರೀ ಜಿ.ಬಿ. ನೇಸರಗಿ, ಶ್ರೀ ಎನ್.ಬಿ. ಗುಡಸಿ ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಕಚೇರಿಯ ಅಧೀಕ್ಷಕರಾದ ಶ್ರೀ ದಿನೇಶ ರೆಡ್ಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯ ಶಿಕ್ಷಣ ಸಂಯೋಜಕರು ಶ್ರೀ ಪ್ರಭು ಬಿರಡ, ಸಿ.ಆರ್.ಪಿ. ಶ್ರೀ ಆರ್.ಎಸ್. ರಜಪೂತ ಶಾಲೆಯ ಎಲ್ಲ ಶಿಕ್ಷಕ ಬಂಧುಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಚಿಕ್ಕೋಡಿ ತಾಲೂಕಿನ ಆಶಾದೀಪ ಸಮುದಾಯ ಕಲಾ ತಂಡದವರು ಪರಿಸರ ಜಾಗೃತಿ ಕುರಿತು ಬೀದಿ ನಾಟಕ ಪ್ರದರ್ಶನ ಮಾಡಿದರು. ಫ್ಲಾಕ್ ಲೀಡರ್ ಶ್ರೀಮತಿ ಎಂ.ಜೆ. ಜೀವನಗೌಡ್ರ ಕಾರ್ಯಕ್ರಮ ನಿರೂಪಿಸಿದರು. ಎ.ಎಸ್.ಓ.ಸಿ (ಸ್ಕೌಟ್) ಡಿ.ಬಿ. ಅತ್ತಾರ ಸ್ವಾಗತಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಜಯಶ್ರೀ ಚೌಗಲಾ ವಂದಿಸಿದರು. ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಶಾಲೆಗಳಿಂದ 300ಕ್ಕೂ ಹೆಚ್ಚು ಕಬ್–ಬುಲ್‌ಬುಲ್, ಸ್ಕೌಟ್ ಮತ್ತು ಗೈಡ್‌ಗಳು ಹಾಗೂ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು. ಸದರಿ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಸಂಪೂರ್ಣ ಸಹಕಾರ ನೀಡಿದರು.

## ಬಳ್ಳಾರಿ

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಸಿರುಗುಪ್ಪ ತಾಲ್ಲೂಕು ಬಳ್ಳಾರಿ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಸಿ ನಡುವುದರ ಮೂಲಕ ಆಚರಿಸಲಾಯಿತು. ಸರ್ಕಾರಿ ಪ್ರೌಢ ಶಾಲೆ ಅರಳಿಗನೂರು ತಾಲ್ಲೂಕು, ಸಿರುಗುಪ್ಪ ಜಿಲ್ಲೆ ಬಳ್ಳಾರಿಯಲ್ಲಿ ಶ್ರೀ ಹುಸೇನ್ ಪೀರ್, ಮುಖ್ಯ ಗುರುಗಳು, ಶ್ರೀ ನಟರಾಜ ಸ್ವಾಮಿ ಎ.ಎಲ್.ಟಿ. (ಎಸ್) ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಸಿರುಗುಪ್ಪ ಜಿ॥ ಬಳ್ಳಾರಿ ಸಹಶಿಕ್ಷಕರು ಹಾಗೂ ಸ್ಕೌಟ್ಸ್‌ಗಳು ಭಾಗವಹಿಸಿದ್ದರು. ಮುಖ್ಯ ಗುರುಗಳು ಸಸಿ ನೆಡುವುದರೊಂದಿಗೆ ವಿಶ್ವ ಪರಿಸರ ದಿನದ ಶುಭಾಶಯಗಳನ್ನು ತಿಳಿಸುತ್ತಾ "ಪ್ರಕೃತಿಯನ್ನು ತಾಯಿ ಎಂದು ಪೂಜಿಸಿ, ದೇವರೆಂದು ಗೌರವಿಸಿ, ಮಗುವೆಂದು ರಕ್ಷಿಸಿ, ಸ್ನೇಹಿತರಂತೆ ಬೆಂಬಲಿಸಿ" ಎಂದರು. ಶಾಂತಿ ನಿಕೇತನ ವಿದ್ಯಾ ಮಂದಿರ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಬಳ್ಳಾರಿ ರಸ್ತೆ ಸಿರುಗುಪ್ಪದಲ್ಲಿ ಶಾಲಾ ಆಡಳಿತ ಮಂಡಳಿಯ



ಮುಖ್ಯಸ್ಥರಾದ ಶ್ರೀ ಕೆ. ಕೃಷ್ಣ, ಮುಖ್ಯ ಗುರುಗಳಾದ ಶ್ರೀಮತಿ ಲಲಿತ ಶಾಸ್ತ್ರಿ, ಶ್ರೀಮತಿ ರುಕ್ಸಾನ ಪರ್ವೀನ್, ಸ್ಕೌಟ್ಸ್ ಶಿಕ್ಷಕರಾದ ಶ್ರೀ ಸುಧೀಂದ್ರ ಕೆ., ಗೈಡ್ಸ್ ಕ್ಯಾಪ್ಟನ್ ಶ್ರೀಮತಿ ಯೋಗೇಶ್ವರಿ ಮತ್ತು ಎಲ್ಲಾ ಶಿಕ್ಷಕಿಯರು ಹಾಗೂ ಸ್ಕೌಟ್ಸ್–ಗೈಡ್ಸ್‌ಗಳು ಹಾಗೂ ಶಿಕ್ಷಕರು ಭಾಗವಹಿಸಿ. ಸಸಿಗಳನ್ನು ನೆಟ್ಟು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು. ಶ್ರೀ ಕೃಷ್ಣದೇವರಾಯ ಶಾಲೆಯ ಮುಖ್ಯಸ್ಥರಾದ ಶ್ರೀ ಯಲಿಗಾರ ವೆಂಕಟೇಶ್, ಮುಖ್ಯ ಗುರುಗಳು ಹಾಗೂ ಸ್ಕೌಟ್ಸ್ ಶಿಕ್ಷಕರಾದ ಶ್ರೀ ಅಮರೇಶ್ ಕಬ್ಸ್ ಶಿಕ್ಷಕರಾದ ಶ್ರೀ ಮಂಜುನಾಥ ಹಾಗೂ ಮಕ್ಕಳು ಸಸಿ ನೆಡುವುದರೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ರಾಜೀವ್ ಗಾಂಧಿ ನಗರ) ಸಿರುಗುಪ್ಪದಲ್ಲಿ ಶ್ರೀಮತಿ ಗೀತಾ ಜೆ., ಗೈಡ್ಸ್ ಶಿಕ್ಷಕಿ ಶ್ರೀಮತಿ ಅಶ್ವಿನಿ ಸಹ ಶಿಕ್ಷಕಿ ಹಾಗೂ ಮಕ್ಕಳೊಂದಿಗೆ ಸಸಿ ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣಯನ್ನು ಆಚರಿಸಿದರು.

## ಬೆಂಗಳೂರು ಗ್ರಾಮಾಂತರ

* ಜಿಲ್ಲಾ ಸಂಸ್ಥೆ ಬೆಂಗಳೂರು ಗ್ರಾಮಾಂತರ, ಎಲಿಟ್ ಇಂಟರ್ನ್ಯಾಷನಲ್ ಬೂದಿಗೆರೆ ವತಿಯಿಂದ ಮೇ 26 ರಿಂದ 28ರ ವರೆಗೆ ಸ್ಕೌಟ್, ಗೈಡ್, ಕಬ್‌ಗಳಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರವನ್ನು ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀಮತಿ ಹೈಮಾ ರಮೇಶ್‌ರವರು ಉದ್ಘಾಟಿಸಿದರು. ದೇವನಹಳ್ಳಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿದಾಗ ಡಾ. ಸನತ್ ಕುಮಾರ್ ಹಾಗೂ ಸಿಸ್ಟರ್ ಮಮತಾರವರು ಪ್ರಥಮ ಚಿಕಿತ್ಸೆ ಬಗ್ಗೆ ತಿಳಿಸಿಕೊಟ್ಟರು, ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಪೋಷಕರು ಭಾಗವಹಿಸಿದ್ದರು. ಹೊರಸಂಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಶಾಲೆಯ ದೈಹಿಕ ಶಿಕ್ಷಕಿಯಾದ ಶ್ರೀಮತಿ ಸ್ವಪ್ನರವರ ನೇತೃತ್ವದಲ್ಲಿ ಶಿಬಿರ ನಡೆಸಲಾಯಿತು.



* ಜಿಲ್ಲಾ ಸಂಸ್ಥೆ ಬೆಂಗಳೂರು ಗ್ರಾಮಾಂತರ ನೆಲಮಂಗಲ ಸ್ಥಳೀಯ ತಾಲ್ಲೂಕು ಸಂಸ್ಥೆ ಜೂನ್ 05 ರಂದು ಪರಿಸರ ದಿನಾಚರಣೆಯನ್ನು ನೆಲಮಂಗಲ ತಾಲ್ಲೂಕಿನ ಪದಾಧಿಕಾರಿಗಳು ಹಾಜರಿದ್ದರು ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಜಕ್ಕಸಂದ್ರ ಇಲ್ಲ ಪರಿಸರ ದಿನಾಚರಣೆ ನಡೆಸಲಾಯಿತು.



* ಜಿಲ್ಲಾ ಸಂಸ್ಥೆ ಬೆಂಗಳೂರು ಗ್ರಾಮಾಂತರ ದೊಡ್ಡಬಳ್ಳಾಪುರ ಸ್ಥಳೀಯ ತಾಲ್ಲೂಕು ಸಂಸ್ಥೆ ಜೂನ್ 05 ರಂದು ಪರಿಸರ ದಿನಾಚರಣೆಯನ್ನು ನಳಂದ ಪ್ರೌಢಶಾಲೆ ಹಾಗೂ ನಿವೇದಿತ ಪ್ರೌಢಶಾಲೆ ಹಾಗೂ ಸರಸ್ವತಿ ಶಾಲೆಯ ಆವರಣದಲ್ಲಿ ನಡೆಸಲಾಯಿತು.

* ಎಲಿಟ್ ಇಂಟರ್ನ್ಯಾಷನಲ್ ಶಾಲೆ ಬೂದಿಗೆರೆ ಜೂನ್ 05 ರಂದು ಪರಿಸರ ದಿನಾಚರಣೆ ಹಾಗೂ ಸ್ವಚ್ಛತಾ ಕಾರ್ಯಕ್ರಮವನ್ನು ಶಾಲಾ ಪರಿಸರದ ಮತ್ತು ಬೂದಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು.

* ಜೂನ್ 06 ರಂದು ಡಾ. ಆನಿಬೆಸೆಂಟ್ ಪಾರ್ಕ್, ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ ಇಲ್ಲಿ ಪರಿಸರ ದಿನಾಚರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ




ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ನಾಗರಾಜ್ ರವರ ಮಾರ್ಗದರ್ಶನದಲ್ಲಿ ಆಚರಿಸಲಾಯಿತು. ಜಿಲ್ಲಾ ಕಾರ್ಯದರ್ಶಿ, ಜಿಲ್ಲಾ ಎಡಿಸಿ, ಜಿಲ್ಲಾ ಖಜಾಂಜಿ, ತಾಲ್ಲೂಕು ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಬೆಂಗಳೂರು ದಕ್ಷಿಣ

* The Bangalore South District Association organized a Menstrual Hygiene Awareness Programme for Guides, Rangers and Unit Leaders at Shanthigruha on May 31st. 50 participants attended the Programme, which aimed to educate and empower young girls and women about menstrual health and hygiene. The Programme covered essential topics such as menstrual cycle, hygiene practices and debunking myths surrounding menstruation.




* The Bangalore South District conducted 21st Unit Leaders Conference at Nirmal Nature Camp, Goa from May 28th to June 1st, 2025. 37 participants attended the conference.



* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಸ್ಥಳಿಯ ಮತ್ತು ದಳ ಮಟ್ಟದಲ್ಲಿ ಆಯೋಜಿಸಲಾಯಿತು. ಜಿಲ್ಲಾದ್ಯಾಂತ ಕಬ್–ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಪರಿಸರ ದಿನಾಚರಣೆಯ ಅಂಗವಾಗಿ ಗಿಡಗಳನ್ನು ನೆಡುವುದು, ಹಾಕಿದ ಸಸಿಗಳನ್ನು ಯಾವ ರೀತಿಯಾಗಿ ಪಾಲನೆ ಮಾಡುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಜಾಥವನ್ನು ಆಯೋಜನೆ ಮಾಡಲಾಯಿತು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆ ಹಾಗೂ ರಾಜಾಜಿನಗರ ಸ್ಥಳೀಯ ಸಂಸ್ಥೆ ಇಲ್ಲಿನ ಶ್ರೀ ಎಸ್. ಕಡಾಂಬಿ ವಿದ್ಯಾ ಕೇಂದ್ರ ಹಾಗೂ ವಿದ್ಯಾಮಾನ್ಯ ವಿದ್ಯಾ ಕೇಂದ್ರ ಆಂದ್ರಹಳ್ಳಿ ಇಲ್ಲಿನ ಸ್ಕೌಟ್ಸ್ ಗೈಡ್ಸ್‌ಗಳು ಶಾಲೆಯ ಆವರಣದಲ್ಲಿ ಬೀಜದುಂಡೆ ತಯಾರಿ ಮಾಡಿದರು.



* ಮೇ 25 ರಂದು ವಿಧಾನ ಸೌಧ ಇಲ್ಲಿ ನಡೆದ ವಿಧಾನ ಸಭೆ ಗೈಡೆಡ್ ಟೂರ್ ಎಂಬ ನೂತನ ಕಾರ್ಯಕ್ರಮದ ಉದ್ಘಾಟನೆಯಲ್ಲಿ ಬೆಂಗಳೂರು ಉತ್ತರ ಜಿಲ್ಲೆ 150 ರೋವರ್-ರೇಂಜರ್ ಭಾಗವಹಿಸಿದರು. ಬಾಣಸವಾಡಿ ಸ್ಥಳೀಯ ಸಂಸ್ಥೆ ವತಿಯಿಂದ ಸಿಂಧೂರ ವಿಜಯ ಕಾರ್ಯಕ್ರಮದ ತಿರಂಗ ಯಾತ್ರೆ ಕಾರ್ಯಕ್ರಮದಲ್ಲಿ ಮಾರುತಿ ವಿದ್ಯಾಲಯ ಹಾಗೂ ಲಿಟಲ್ ಎಂಜಲ್ ಶಾಲೆಯ ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದರು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ವರ್ಧಮಾನ್ ಕಳಸೂರ್ ಸಂಘಟಿಸಿದರು.

* ಚಾಮುಂಡಿ ಮುಕ್ತದಳ ಮಲ್ಲೇಶ್ವರ ಹಾಗೂ ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಮೈಸೂರು ಸಂಸ್ಥಾನದ ಅರಸರಾದ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ 141ನೇ ಜನ್ಮ ದಿನಾಚರಣೆಯನ್ನು ಜೂನ್ 04 ರಂದು ಚಾಮುಂಡಿ ಮುಕ್ತದಳ ಮಲ್ಲೇಶ್ವರ ಇಲ್ಲಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭಾಗವಹಿಸಿ "ಮೈಸೂರು ಒಡೆಯರ್‌ರವರ ಸ್ಕೌಟಿಂಗ್ ಬೆಳವಣಿಗೆಗೆ ಅಪಾರ ಕೊಡುಗೆ ಹಾಗೂ ಅವರನ್ನು ಗೌರವಿಸುವುದು ಹಾಗೂ ಸ್ಮರಿಸುವುದು ನಮ್ಮ ಪ್ರಥಮ ಆದ್ಯತೆ" ಎಂದರು. ಕಾರ್ಯಕ್ರಮದಲ್ಲಿ ಹಿರಿಯರಾದ ಶ್ರೀ ಚಂದ್ರಶೇಖರ್, ಚಾಮುಂಡಿ ಮುಕ್ತದಳದ ನಾಯಕರಾದ ಶ್ರೀ ನರಸಿಂಹಮೂರ್ತಿ, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಎನ್. ಶ್ರೀನಿವಾಸನ್, ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಹೇಮಂತ್ ಕುಮಾರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಹಾಗೂ ಮಲ್ಲೇಶ್ವರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಜ್ಯೋತಿ ರಂಗನಾಥ್ ಉಪಸ್ಥಿತರಿದ್ದರು.



* ವಿಶ್ವ ಪರಿಸರ ದಿನದ ಪ್ರಯುಕ್ತ ಬೆಂಗಳೂರು ಉತ್ತರ ಜಿಲ್ಲೆಯ ಈ ಶಾಲಾ ದಳಗಳಲ್ಲಿ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಫ್ಲಾರೇನ್ಸ್ ಹೈಸ್ಕೂಲ್, ಡಾಲರಸ್ ಕಾಲೋನಿ, ದೆವ್ ಇನ್ ಸ್ಕೂಲ್ ಸಹಕಾರಿ ನಗರ, ರಾಮಯ್ಯ ವಿದ್ಯಾನಿಕೇತನ್ ಮತ್ತಿಕೆರೆ, ಎಮ್.ಇ.ಸಿ. ಪಬ್ಲಿಕ್ ಸ್ಕೂಲ್ ಯಲಹಂಕ, ಶ್ರೀ ದಕ್ಷಾ ಅಕಾಡೆಮಿ ಆಂದ್ರಹಳ್ಳಿ, ಸೌಂದರ್ಯ ಪಿ.ಯು. ಕಾಲೇಜು, ಕ್ಲೂನಿ ಕ್ವಾಲೆಂಟ್ ಹೈಸ್ಕೂಲ್, ಮಾರುತಿ ಇಂಟರ ನ್ಯಾಶನಲ್ ಪಬ್ಲಿಕ್ ಸ್ಕೂಲ್, ಶ್ರೀ ಅಯ್ಯಪ್ಪ ಎಜುಕೇಶನ್ ಸೆಂಟರ್ (ಸಿ.ಬಿ.ಎಸ್.ಸಿ.) ಅಬ್ಬಿಕೆರೆ.

* ಮೇ 31ರಂದು ಗಂಟಗಾನ ಹಳ್ಳಿಯಲ್ಲಿ ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 35ನೇ ತಿಂಗಳ ಕಾರ್ಯಕ್ರಮವು ನಡೆಯಿತು. ಗಂಟಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಗಿಡಗಳಿಗೆ ನೀರು ಉಣಿಸಲಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ 145 ರೋವರ್ಸ್-ರೇಂಜರ್ಸ್ ಭಾಗವಹಿಸಿದ್ದರು ಮತ್ತು ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಈ ಕಾರ್ಯಕ್ರಮವನ್ನು ಸಂಘಟಿಸಿದರು. ಕ್ಯಾಪಕೊ ಕಂಪೆನಿಯವರು ಸಹ ಈ ಸಮುದಾಯ ಸೇವೆಯಲ್ಲಿ ಭಾಗವಹಿಸಿದರು.



* ಮಲ್ಲೇಶ್ವರಂ ಕ್ಲೂನಿ ಕಾನ್ವೆಂಟ್ ಹೈಸ್ಕೂಲ್ ಇಲ್ಲಿನ ಬುಲ್‌ಬುಲ್ ಹಾಗೂ ಗೈಡ್ಸ್‌ದಳದ ವಂತಿಯಿಂದ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಪರಿಸರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಇನ್‌ಸ್ಟಿಟ್ಯೂಟ್ ಆಫ್ ವುಡ್ ಸೈನ್ಸ್ ಅಂಡ್ ಟೆಕ್ನಾಲಜಿಗೆ ಬೇಟಿ ನೀಡಿ ಕ್ಯಾಂಪಸ್‌ನಲ್ಲಿ ಸಸಿಗಳನ್ನು ನಡೆಲಾಯಿತು ಮತ್ತು ಅಲ್ಲಿನ ಹಸಿರು ಮನೆಗೆ ಬೇಟಿ ನೀಡಲಾಯಿತು. ಶಾಲಾ ಪ್ರಾಂಶುಪಾಲರಾದ ಸಿಸ್ಟರ್ ಮಂಜು ಶುಭಾಶಯ ಹಾರೈಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ರೂಪ, ಶ್ರೀಮತಿ ಮೇರಿರೋಸಾರಿಯೋ ಶ್ರೀಮತಿ ಉಷಾ, ಶ್ರೀಮತಿ ಮೀನಾ, ಶ್ರೀಮತಿ ವೀಣಾ ಇವರುಗಳು ಕಾರ್ಯಕ್ರಮಕ್ಕೆ ಸಹಕರಿಸಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಡಾ. ಮೇರಿ ಫಿಲೋಮಿನ ಆಲ್ಬರ್ಟ್ ಎಲ್.ಟಿ. ಬುಲ್‌ಬುಲ್ ಇವರು ವಹಿಸಿದ್ದರು.

* ಶಿವಾಜಿನಗರ ಸ್ಥಳೀಯ ಸಂಸ್ಥೆಯ ಶ್ರದ್ಧಾಂಜಲಿ ಇಂಟಿಗ್ರೇಟೆಡ್ ಪ್ರೈಮರಿ (ವಿಶೇಷ ಶಾಲೆ) ಶಾಲೆಯಲ್ಲಿ ಕಬ್-ಬುಲ್‌ಬುಲ್ ದಳದಿಂದ ವಿಶ್ವ ಪರಿಸರ ದಿನಾಚರಣೆ ಯಶಸ್ವಿಗಾಗಿ ನಡೆಸಲಾಯಿತು. ಕಬ್-ಬುಲ್‌ಬುಲ್‌ಗಳು ಸಸ್ಯಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಜಾಥಾದಲ್ಲಿ ಭಾಗವಹಿಸಿದರು. ಶಾಲಾ ಆವರಣದೊಳಗೆ ಇರುವ ಸಸ್ಯಗಳಿಗೆ ನೀರುಣಿಸುವ ಮೂಲಕ ಸಕ್ರಿಯವಾಗಿ ಭಾಗವಹಿಸಿದರು. ಶ್ರೀಮತಿ ಎಸ್. ರಾಧಾಮಣಿ, ಫ್ಲಾಕ್ಲೀಡರ್, ಶ್ರೀಮತಿ ನಾಗವೇಣಿ (ಲೇಡಿಕಬ್ ಮಾಸ್ಟರ್) ಮತ್ತು ಶ್ರೀಮತಿ ಭೂದೇವಿ ಇವರುಗಳ ಕಾರ್ಯಕ್ರಮ ನಡೆಸಿದರು.

## ಬೆಂಗಳೂರು ಪೂರ್ವ

* ಬೆಂಗಳೂರು ಪೂರ್ವ ಆನೇಕಲ್ ಜಿಲ್ಲಾ ಸಂಸ್ಥೆ ಕಛೇರಿಯಲ್ಲಿ ಜೂನ್ 04 ರಂದು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಜನ್ಮ ದಿನಾಚರಣೆವನ್ನು ಆಚರಿಸಲಾಯಿತು.



* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಎ.ಎನ್ ನರೇಂದ್ರ ಕುಮಾರ್, ಜಿಲ್ಲಾ ಕಾರ್ಯದರ್ಶಿರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಪರಿಸರ ದಿನಾಚರಣೆಯ ಅಂಗವಾಗಿ ಜಿಲ್ಲಾ ಕಛೇರಿಯ ಆವರಣದಲ್ಲಿ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎನ್. ವೆಂಕಟೇಶ್ ರವರು ಸಸಿ ನೆಡುವ ಮೂಲಕ ಪರಿಸರ ದಿನ ಕುರಿತು ತಿಳಿಸಿದರು.



* ಮೇ 11 ರಂದು ಬಿ.ಇ.ಎಸ್ ಕಾರ್ಮಲ್ ಕಿತ್ತಿಗಾನಹಳ್ಳಿ ಶಾಲೆಯ ಸ್ಕೌಟ ಮಾಸ್ಟರ್ ಶ್ರೀ ಅರುಣ್‌ರವರು ತಮ್ಮ ಶಾಲೆಯ ಪ್ರಾಂಶುಪಾರು ಹಾಗೂ ಸಹ ಶಿಕ್ಷಕರ ಸಹಾಕರದಿಂದ ಸ್ಕೌಟ್‌ಗಳಿಗೆ ರಾಷ್ಟ್ರೀಯ ಬೈಸಿಕಲ್ ದಿನಾಚರಣೆಯ ಕಾರ್ಯಕ್ರಮವನ್ನು ತಮ್ಮ ದಳದ ಮಟ್ಟದಲ್ಲಿ ಸಂಘಟನೆ ಮಾಡಿದರು. ಶಾಲೆಯಿಂದ ಕಿತ್ತಗಾನಹಳ್ಳಿಯ ಮುಖ್ಯ ರಸ್ತೆಯಲ್ಲಿ ಸೈಕಲ್ ಜಾಥ ಹಮ್ಮಿಕೊಳ್ಳಲಾಗಿತ್ತು. ಈ ವೇಳೆಯಲ್ಲಿ ಸೈಕಲ್ ಬಳಸಿ ಇಂಧನ ಉಳಿಸಿ, ಸೈಕಲ್ ಬಳಸಿ ಪರಿಸರ ಉಳಿಸಿ, ಉತ್ತಮ ಆರೋಗ್ಯಕ್ಕಾಗಿ ಸೈಕಲ್ ಬಳಸಿ ಎಂಬ ಫಲಕಗಳನ್ನು ಸೈಕಲ್ ಮುಂದೆ ಹಾಕಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ತೊಡಗಿದ್ದರು.



* ಬೆಂಗಳೂರು ಪೂರ್ವ ಆನೇಕಲ್ ಜಿಲ್ಲಾ ಸಂಸ್ಥೆ ವತಿಯಿಂದ ಏಪ್ರಿಲ್ 04 ರಿಂದ 06ರ ವರಗೆ 2025–26ನೇ ಸಾಲಿನ ತೃತೀಯ ಸೋಪಾನ್ ಮತ್ತು ರಾಜ್ಯ ಪುರಸ್ಕಾರ್ ಪೂರ್ವ ಸಿದ್ಧತಾ ತರಬೇತಿ ಶಿಬಿರವನ್ನು ಸ್ಕೂಲ್ ಆಫ್ ಇಂಡಿಯಾ ಬನ್ನೇರುಘಟ್ಟದಲ್ಲಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಜಿಲ್ಲಾ ಕಾರ್ಯದರ್ಶಿರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮಕ್ಕೆ ಶಾಲೆಯ ಪ್ರಾಂಶುಪಾಲರು ಆಡಳಿತ ಮಂಡಳಿ, ಶಾಲೆ ಸಿಬ್ಬಂದಿಗಳು ಹಾಗೂ ಸದರಿ ಶಾಲೆಯ ಸ್ಕೌಟರ್ಸ್ ಮತ್ತು ಗೈಡರ್ಸ್ ಸಹಕಾರ ನೀಡಿದರು.



* ಬೆಂಗಳೂರು ಪೂರ್ವ ಆನೇಕಲ್ ಜಿಲ್ಲಾ ಸಂಸ್ಥೆ ವತಿಯಿಂದ ಏಪ್ರಿಲ್ 09 ರಂದು ಆನೇಕಲ್ ಗುರುಭವನದಲ್ಲಿ 2024–25ನೇ ಸಾಲಿನಲ್ಲಿ ರಾಜ್ಯ ಪುರಸ್ಕಾರ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್– ರೇಂಜರ್ಸ್‌ಗಳಿಗೆ



ಪ್ರಮಾಣ ಪತ್ರ ವಿತರಣೆ ಶ್ರೀ ಎ.ಎನ್ ನರೇಂದ್ರ ಕುಮಾರ್ ಜಿಲ್ಲಾ ಕಾರ್ಯದರ್ಶಿರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿ.ಆರ್.ಸಿ. ಶ್ರೀ ಭಾಸ್ಕರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಶ್ರೀ ಮಂಜುನಾಥ್, ಜಿಲ್ಲಾ ಖಜಾಂಚಿ ಶ್ರೀ ಲಕ್ಷ್ಮೀಕಾಂತ್‌ರಾಜ್‌ರವರು ಉಪಸ್ಥಿತರಿದ್ದರು.

* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ಸೆಂಟ್ ಮೇರಿಸ್ ಸ್ಕೂಲ್ ಹೆಬ್ಬಗೋಡಿ ಟೌನ್ ಶಾಲೆಯ ಗೈಡ್ ಕ್ಯಾಪ್ಟನ್ ಕುಮಾರಿ ಸೆಲೀನಾ ಮೇರಿರವರು ತಮ್ಮ ಶಾಲೆಯ ಪ್ರಾಶುಪಾಲರು ಮತ್ತು ಸಹ ಶಿಕ್ಷಕರ ಸಹಕಾರದಲ್ಲಿ 2024–25ನೇ ಸಾಲಿನ ಬೇಸಿಗೆ ಶಿಬಿರವನ್ನು ಮಾರ್ಚ್ 24 ರಿಂದ ಏಪ್ರಿಲ್ 05ರ ವರಗೆ ದಳದ ಮಟ್ಟದಲ್ಲಿ ಹಮ್ಮಿಕೊಂಡಿದ್ದರು. ಸ್ಥಳೀಯ ಗ್ರಾಮಗಳಿಗೆ ಭೇಟಿ ನೀಡಿ ಪಶುಪಾಲನೆ ಕುರಿತು ಮಾಹಿತಿ ನೀಡಲಾಗಿದೆ. ನಮ್ಮ ನಡೆ ಹಳ್ಳಿಯ ಕಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದಳದ ನಾಯಕ ಶ್ರೀ ಕೃಷ್ಣನಾಯ್ಕ್, ಶ್ರೀ ರಮೇಶ್ ಸಹಯೋಗದಲ್ಲಿ ಬೇಸಿಗೆ ಶಿಬಿರವನ್ನು ಸಂಘಟನೆ ಮಾಡಲಾಗಿದೆ.

* ಸೆಂಟ್ ಫಿಲೋಮಿನಸ್ ಆಂಗ್ಲ ಶಾಲೆ ಸರ್ಜಾಪುರ ಗೈಡ್ಸ್‌ಗಳು. ಬೇಸಿಗೆ ಶಿಬಿರದಲ್ಲಿ ಮೆಹಂದಿ ಹಾಕುವ ಚಟುವಟಿಕೆ ಹಮ್ಮಿಕೊಳ್ಳಲಾಗಿತ್ತು.

* ಏಪ್ರಿಲ್ 07 ರಿಂದ 12ರ ವರಗೆ ಬಿ.ಇ.ಎಸ್. ಕಾರ್ಮಲ್ ಕಿತ್ತಿಗಾನಹಳ್ಳಿ ಶಾಲೆಯ ಸ್ಕೌಟ ಮಾಸ್ಟರ್ ಶ್ರೀ ಅರುಣ್‌ರವರು ಸನಿವಾಸ ಬೇಸಿಗೆ ಶಿಬಿರ ಹಮ್ಮಿಕೊಂಡಿದ್ದರು. ಒಂದು ದಿನ ಮುತ್ಯಾಲಮಡು ಆನೇಕಲ್ ಪ್ರವಾಸಿ ಸ್ಥಳಕ್ಕೆ ಸೈಕಲ್ ಹೊರಸಂಚಾರವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಪ್ರಾಂಶುಪಾಲರು ಉತ್ತಮ ರೀತಿಯಲ್ಲಿ ಸಹಕರಿಸಿದರು.

* 2024–25ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿ ವತಿಯಿಂದ ಮಾರ್ಚ್ 21 ರಿಂದ ಏಪ್ರಿಲ್ 04ರ ವರೆಗೆ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರದಲ್ಲಿ ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆ ವತಿಯಿಂದ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಹಾಗೂ ಸ್ಕೌಟರ್ಸ್–ಗೈಡರ್ಸ್ ಶಿಕ್ಷಕರು ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್ ನರೇಂದ್ರ ಕುಮಾರ್‌ರವರ ಸಲಹೆ ಮತ್ತು ಮಾರ್ಗದರ್ಶನದಂತೆ ಸೇವೆಸಲ್ಲಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ವೆಂಕಟೇಶ್, ಬಿ.ಆರ್.ಸಿ. ಶ್ರೀ ಭಾಸ್ಕರ್ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಬೀದರ್

* ಮೇ 29 ರಂದು ಶಾಲಾ ಪ್ರಾರಂಭೋತ್ಸವ ಅಂಗವಾಗಿ ಸ.ಕಿ.ಪ್ರಾ. ಶಾಲೆ, ಶಹಾಪುರ ತಾ: ಬೀದರ ಶಾಲೆಯ ವಿದ್ಯಾರ್ಥಿಗಳನ್ನು ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಹೂಗುಚ್ಛ ನೀಡಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಪೀರಪ್ಪ, SDMC ಅಧ್ಯಕ್ಷರು, ಶ್ರೀಮತಿ ಸುಜಾತ ಪೂಜಾರಿ ಆಔಖ, ಶ್ರೀಮತಿ ಶೈಲಾ ಮಂಗಲಪೇಟ್



ಅಖಿಕ, ಶ್ರೀಮತಿ ಅನಿತಾ ಮುಖ್ಯ ಗುರುಗಳು, ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ. ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಮತ್ತು ಮಕ್ಕಳು ಭಾಗವಹಿಸಿದ್ದರು.

* ಜೂನ್ 05 ರಂದು ಸ್ಥಳೀಯ ಸಂಸ್ಥೆ ಬಸವ ಕಲ್ಯಾಣ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಹಾಗೂ ಚತುರ್ಥ ಚರಣ್, ಹಿರಕ್ ಪಂಕ್ ಪ್ರಶಸ್ತಿ ಪತ್ರ ವಿತರಣಾ ಸಮಾರಂಭ ಮತ್ತು ತಾಲೂಕ ಮಟ್ಟದ ಸ್ಕೌಟರ್-ಗೈಡರ್ ಸಮಾವೇಶವನ್ನು ಜ್ಞಾನಪ್ರಿಯ ಶಾಲೆ ಬಸವ ಕಲ್ಯಾಣ ಇಲ್ಲಿ ಶ್ರೀ ಚರಣು ಸಲಗರ್, ವಿಧಾನ ಸಭಾ ಸದಸ್ಯರು, ಬಸವ ಕಲ್ಯಾಣ ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರು ಸಸಿಗೆ ನೀರು ಹಾಕುವ ಮೂಲಕ ಸಮಾರಂಭವನ್ನು ಉದ್ಘಾಟಿಸಿದರು. ಅತಿಥಿಗಳಾಗಿ ಶ್ರೀಮತಿ ಲೀಲಾವತಿ ಚಕೋತೆ ಉಪಾಧ್ಯಕ್ಷರು, ಶ್ರೀಮತಿ ಮಂಗಲಾ ಭಗವಾತ್ ಉಪಾಧ್ಯಕ್ಷರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಸ್ಕೌಟರ್-ಗೈಡರ್, ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು.



## ಚಾಮರಾಜನಗರ

* ಜೂನ್ 05 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೇಗೂರು ಗುಂಡ್ಲುಪೇಟೆ ತಾಲೂಕಿನಲ್ಲಿ "ಮರ ಬೆಳೆಸಿ ಪರಿಸರ ಉಳಿಸಿ" ಎಂಬ ಧ್ಯೇಯ ವಾಕ್ಯದೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮವನ್ನು ಮೂಡಗೂರು ಮಠದ ಅಧ್ಯಕ್ಷರು ಹಾಗೂ ಶ್ರೀಗಳಾದ ಇಮ್ಮಡಿ ಉದ್ದಾನ ಸ್ವಾಮಿಗಳು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಶ್ರೀಮತಿ ಅನ್ನಪೂರ್ಣಮ್ಮರವರು ಉಪಸ್ಥಿತರಿದ್ದರು.

* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಪುಣ್ಯದ ಹುಂಡಿ, ಸಂತ ತೆರಸ ವಿದ್ಯಾ ಮಂದಿರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಮ್ಮಡಹಳ್ಳಿ ಶಾಲೆಗಳಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಗ್ರಾಮದ ಬೀದಿಗಳಲ್ಲಿ ಘೋಷ ವಾಕ್ಯದೊಂದಿಗೆ ಜಾಥಾವನ್ನು ಕೈಗೊಂಡು ಆಚರಿಸಲಾಯಿತು.

* ಜೂನ್ 06 ರಂದು ಜೆ.ಎಸ್. ಪ್ರೌಢ ಶಾಲೆ ಹೊರೆಯಲದಲ್ಲಿ ಸಾಂಕ್ರಮಿಕ ರೋಗ ಹರಡುವಿಕೆ ಮತ್ತು ನಿಯಂತ್ರಣದ ಬಗ್ಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸ್ವಾಮಿ, ಹಿರಿಯ ಆರೋಗ್ಯ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದು ಮಕ್ಕಳಿಗೆ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕರಾದ ಶ್ರೀಮತಿ ರೇಣುಕಮ್ಮ ಹಾಗೂ ಶ್ರೀ ಗುರುಮಲ್ಲೇಶ್ವರವರು ಉಪಸ್ಥಿತರಿದ್ದರು.

* ಜೂನ್ 06 ರಂದು ಅರಣ್ಯ ಇಲಾಖೆ ಹಾಗೂ ಜಿಲ್ಲಾ ಸಂಸ್ಥೆ ಚಾಮರಾಜನಗರ ಸಹಯೋಗದಲ್ಲಿ ಚಾಮರಾಜನಗರದ ಕರಿವರದರಾಜನ ವೃಕ್ಷವನದಲ್ಲಿ "ಪ್ಲಾಸ್ಟಿಕ್ ಮಾಲಿನ್ಯವನ್ನು ಅಂತ್ಯಗೊಳಿಸೋಣ" ಧ್ಯೇಯವಾಕ್ಯದೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಮಂಜುನಾಥ್ ಹಾಗೂ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಸಂದೀಪ್‌ರವರು ಉಪಸ್ಥಿತರಿದ್ದು ಸ್ಕೌಟ್ಸ್-ಗೈಡ್ಸ್, ರೋವರ್-ರೇಂಜರ್ಸ್‌ಗಳಿಗೆ ಪರಿಸರದ ಕಾಳಜಿಯ ಬಗ್ಗೆ ಮತ್ತು ವಾಯು ಮಾಲಿನ್ಯದಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿದರು. ನಂತರ ಅರಣ್ಯದಲ್ಲಿ ವಿವಿಧ ಜಾತಿಯ ಸಸ್ಯಗಳನ್ನು ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ಸುಮಾರು 150ಕ್ಕೂ ಹೆಚ್ಚು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಶ್ರೀ ಅಶೋಕ್ ಕುಮಾರ್ ಕೆ.ಪಿ., ಜಿಲ್ಲಾ ಸಂಘಟಕರು ಸಂಘಟಿಸಿದರು.

* ಜೂನ್ 10 ರಿಂದ 11ರ ವರೆಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಿಡಬ್ಲ್ಯೂಡಿ ಕಾಲೋನಿ, ಚಾಮರಾಜನಗರದಲ್ಲಿ ಜಿಲ್ಲಾ ಮಟ್ಟದ ಪ್ರಥಮ ಚಿಕಿತ್ಸಾ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಿಬಿರದ ಜಿಲ್ಲಾ ಆಯುಕ್ತರು ಗೈಡ್ ಡಾ. ಶ್ವೇತಾ ಶಶಿಧರ್‌ರವರು ನಾಯಕಿಯಾಗಿದ್ದರು. ಈ ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿಗಳು ಶ್ರೀ ವಿ.ಎಂ. ರಾಮಚಂದ್ರ ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಶಿಬಿರದಲ್ಲಿ 150ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಈ ಶಿಬಿರವನ್ನು ಶ್ರೀ ಅಶೋಕ್ ಕುಮಾರ್ ಕೆ.ಪಿ., ಜಿಲ್ಲಾ ಸಂಘಟಕರು ಸಂಘಟಿಸಿದರು.



## ಚಿತ್ರದುರ್ಗ

* 2025-26ನೇ ಸಾಲಿನ ಜಿಲ್ಲಾ ರೋವರ್-ರೇಂಜರ್ಸ್‌ಗಳ ಯುವ ಸಮಿತಿಯ ಸಭೆಯು ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಯುವ ಸಮಿತಿಯ ಅಧ್ಯಕ್ಷರಾದ ಶ್ರೀ ಕಾರ್ತಿಕ್ ರಾಮಚಂದ್ರ, ರಾಜ್ಯ ಯುವ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಪ್ರಮೀಳಾ, ರಾಜ್ಯ ಸಂಸ್ಥೆಯ ಸಮುದಾಯ ಸೇವೆ ಮತ್ತು ಸಮುದಾಯ ಅಭಿವೃದ್ಧಿ ಸಂಚಾಲಕರಾದ ಶ್ರೀ ಆರ್.ಜೆ. ಗಿರೀಶ್‌ರವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎಸ್. ಪರಮೇಶ್ವರ್ ಅವರು ವಹಿಸಿಕೊಂಡಿದ್ದರು. ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು. ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಸಿ ನಾಗರಾಜ್‌ರವರ ಮೂಲಕ ಹೂವಿನ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯ ಯುವ ಸಮಿತಿಯ ಅಧ್ಯಕ್ಷರಾದ ಕಾರ್ತಿಕ್ ರಾಮಚಂದ್ರರವರು ಸ್ಥಳೀಯ ಮಟ್ಟದ ಯುವ ಸಮಿತಿಯ ಬಗ್ಗೆ ಮಾಹಿತಿ ನೀಡಿದರು. ರಾಜ್ಯ ಸಂಸ್ಥೆಯ ಸಮುದಾಯ ಅಭಿವೃದ್ಧಿ ಮತ್ತು ಸಮುದಾಯ ಸೇವೆಯ ಸಂಚಾಲಕರಾದ ಶ್ರೀ ಆರ್.ಜೆ. ಗಿರೀಶ್ ರಚನಾತ್ಮಕ ಕಾರ್ಯಗಳು ಮತ್ತು ಕೌಶಲ್ಯಾಭಿವೃದ್ಧಿಯನ್ನು ಕುರಿತು ಯಶಸ್ವಿಯಾಗಲಿ ಎಂದು ಹೇಳಿದರು. ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೆ.ಸಿ. ನಾಗರಾಜ್ ಅವರು ರೋವರ್ಸ್-ರೇಂಜರ್ಸ್‌ಗಳ ಯುವ ಸಮಿತಿಯ ಕಾರ್ಯಕ್ರಮ ಯಶಸ್ವಿಯಾಗಲಿ ಎಂದು ಹಾರೈಸಿದರು. "ಯುವಶಕ್ತಿಯು ಸಮಾಜದಲ್ಲಿ ನಡೆಯುವ ಕೆಟ್ಟ ವಿಚಾರಗಳನ್ನು ಹೋಗಲಾಡಿಸಲು ಯುವ ಶಕ್ತಿಯು ಬಹಳ ಮುಖ್ಯವಾಗಿದೆ ಯುವಶಕ್ತಿಯ ಅಭಿವೃದ್ಧಿಯೇ ದೇಶದ ಅಭಿವೃದ್ಧಿ" ಎಂದು ರೋವರ್ ಲೀಡರ್ ಆದ ಶ್ರೀ ಗಂಗಾಧರರವರು ಹೇಳಿದರು.



* ಜೂನ್ 03 ರಂದು ರಾಜ್ಯ ಪುರಸ್ಕಾರ ಪಡೆದ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ವಿತರಣಾ ಸಮಾರಂಭ ಆಯೋಜಿಸಲಾಗಿತ್ತು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿತ್ರದುರ್ಗ ಜಿಲ್ಲಾ ಪಂಚಾಯಿತಿಯ CEO.



ಶ್ರೀ ಸೋಮಶೇಖರ್. ಎಲ್ ರವರು ವಹಿಸಿಕೊಂಡಿದ್ದರು, ಈ ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಸವಿತಾ ಶಿವಕುಮಾರ್ ಎಲ್., ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಎಂ.ಕೆ. ಅನಂತರೆಡ್ಡಿ, ಸ್ಕೌಟ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. "ಸುಂದರ ಬದುಕು ಹಾಗೂ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸ್ಕೌಟ್ ಮತ್ತು ಗೈಡ್ಸ್‌ಗಳ ಪಾತ್ರ ಮಹತ್ವದಾಗಿದೆ" ಎಂದು ಜಿಲ್ಲಾ ಪಂಚಾಯಿತಿಯ CEO ಶ್ರೀ ಸೋಮಶೇಖರ್ ಎಲ್.ರವರು ತಿಳಿಸಿದರು.

* ಜೂನ್ 04 ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಸಿರಿಗೆರೆ ಸಮೀಪದಲ್ಲಿರುವ John Mine of R. Praveen Chandra &Karnataka state Pollution Control Board chitradurga ರವರ ಸಹಯೋಗದೊಂದಿಗೆ ಒಂದು ಸಾವಿರ ಗಿಡಗಳನ್ನು ಪಡೆದು ಚಿತ್ರದುರ್ಗದ ವಿವಿಧ ಶಾಲಾ–ಕಾಲೇಜುಗಳಿಗೆ ನೀಡಲಾಯಿತು.




* ಚಿತ್ರದುರ್ಗ ಸರ್ಕಾರಿ ಕಲಾ ಕಾಲೇಜು ಆವರಣದಲ್ಲಿ ಜೂನ್ 05 ರಂದು ನಡೆದ "ವಿಶ್ವ ಪರಿಸರ ದಿನಾಚರಣೆ"ಯಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ಸಿವಿಲ್ ನ್ಯಾಯಾಧೀಶರಾದ ಶ್ರೀ ಸೋಮಶೇಖರ್‌ರವರು ಭಾಗವಹಿಸಿದ್ದರು. ಗಿಡ ನೆಡುವ ಮೂಲಕ ಪರಿಸರಕ್ಕೆ ಕಾಣಿಕೆ ನೀಡಬೇಕು ಎಂದು ಸಲಹೆ ನೀಡಿದರು ಈ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಶ್ರೀಮತಿ ಏ.ಎಮ್. ಚೈತ್ರ ಉಜ್ವಲ ವೀರಣ್ಣ ಸಹನಾ ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲರಾದ ಶ್ರೀ ಬಿ.ಟಿ. ತಿಪ್ಪೇರುದ್ರಸ್ವಾಮಿ ಉಪ ಅರಣ್ಯ ಸುರಕ್ಷಾಧಿಕಾರಿಗಳಾದ ಶ್ರೀಮತಿ ಅನುಪಮ, ಪೌರಾಯುಕ್ತ ಶ್ರೀಮತಿ ಎಂ ರೇಣುಕಾ ಆರ್.ಎಫ್.ಓ. ಶ್ರೀ ವಸಂತ್, ಚಿತ್ರದುರ್ಗ ಜಿಲ್ಲಾ ಸಂಸ್ಥೆ ಭಾರತ ಸ್ಕೌಟ್ ಮತ್ತು ಗೈಡ್ ಸಂಘಟಕರು ಶ್ರೀ ಮಲ್ಲೇಶಪ್ಪ ಕೆ.ಟಿ. ಕಾಲೇಜಿನ ಪ್ರಾಧ್ಯಾಪಕರು, ರೋವರ್ಸ್ ಮತ್ತು ರೆಂಜರ್ಸ್‌ಗಳು ಭಾಗವಹಿಸಿದ್ದರು.



* ಭರಮ ಸಾಗರದಲ್ಲಿ ಜೂನ್ 05 ರಂದು ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ಸ್‌ಗಳ ಮೂಲಕ ಹಸಿರು ಮನೆ ಸೃಷ್ಟಿಸಲು ಪ್ರತಿಯೊಬ್ಬ ವಿದ್ಯಾರ್ಥಿಗೂ ಗಿಡ ಬೆಳೆಸಲು ಜವಾಬ್ದಾರಿ ವಹಿಸಲಾಯಿತು.

* ಡಾನ್ ಬಾಸ್ಕೋ ಸ್ಕೂಲ್ ಶಾಲಾವರಣದಲ್ಲಿ ಗಿಡಗಳನ್ನು ನೆಟ್ಟು "ವಿಶ್ವ ಪರಿಸರ ದಿನ" ಆಚರಿಸಲಾಯಿತು.

* ಹೊಳಲ್ಕೆರೆ ಡ್ರೀಮ್ ವರ್ಲ್ಡ್ ಶಾಲಾವರಣದಲ್ಲಿ ಗಿಡಗಳನ್ನು ಹಾಕಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

* ಹೊಸದುರ್ಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರೋವರ್ಸ್–ರೇಂಜರ್ಸ್‌ಗಳು ಕಾಲೇಜು ಆವರಣದಲ್ಲಿ ಗಿಡಗಳನ್ನು ಬೆಳೆಸುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

* ಚಿತ್ರದುರ್ಗದ ವಿದ್ಯವಿಕಾಸ ಶಾಲೆಯಲ್ಲಿ ಶಾಲಾವರಣದಲ್ಲಿ ಗಿಡಗಳನ್ನು ಹಾಕಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

* ಜೂನ್ 06 ರಂದು ಸರ್ಕಾರಿ ಕಲಾ ಕಾಲೇಜಿನ ಯುವ ರೆಡ್ ಕ್ರಾಸ್‌ನ ರಕ್ತದಾನ ಶಿಬಿರದಲ್ಲಿ ರೋವರ್ ಶ್ರೀ ವಸಂತ ಕುಮಾರ್ ಜಿ.ಆರ್. ಮತ್ತು ರೋವರ್ ಶ್ರೀ ಅಜಿತ್ ಎಸ್. ಈ ಇಬ್ಬರೂ ರೋವರ್‌ಗಳು ರಕ್ತದಾನವನ್ನು ಮಾಡಿದ್ದಾರೆ ಮತ್ತು ರೋವರ್ಸ್–ರೇಂಜರ್ಸ್‌ಗಳು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದ್ದಾರೆ.



* ಜಿಲ್ಲಾ ಸಂಸ್ಥೆ ಚಿತ್ರದುರ್ಗ. ಪ್ರಾದೇಶಿಕ ಜಂಟಿ ನಿರ್ದೇಶಕರ ಕಚೇರಿ ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ಚಿತ್ರದುರ್ಗ ಕಾರ್ಯಾಲಯದಲ್ಲಿ ಜಿಲ್ಲಾ ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ ಹಾಗೂ ರೋವರ್ಸ್ ಸ್ಕೌಟ್ ಲೀಡರ್ ಹಾಗೂ ರೇಂಜರ್ ಲೀಡರ್‌ಗಳಿಗೆ ಜೂನ್ 06 ರಂದು ಒಂದು ದಿನದ ಮಾಹಿತಿ ತರಬೇತಿ ಕಾರ್ಯಾಗಾರ ಜಿಲ್ಲಾ ಸಂಸ್ಥೆ ಆವರಣ ಚಿತ್ರದುರ್ಗದಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಗಾರದ ಉದ್ಘಾಟನೆಯನ್ನು ಕಾಲೇಜು ಪ್ರಾಂಶುಪಾಲರಾದ ಶ್ರೀ ತಿಪ್ಪೇರುದ್ರಪ್ಪ ನವರು ಸರ್ಕಾರಿ ಕಲಾ ಕಾಲೇಜು ಹಾಗೂ ಸರ್ಕಾರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ರವಿಕಾಂತ್ ಎನ್.ಎಂ., ಚಿತ್ರದುರ್ಗ ಇವರು ನೆರವೇರಿಸಿದರು. ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಲಿಂಗಾರೆಡ್ಡಿಯವರು ಮಾತನಾಡಿದರು. ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಅನಂತರೆಡ್ಡಿಯವರು ಕಾರ್ಯಕ್ರಮಕ್ಕೆ ಸರ್ವರನ್ನು ಸ್ವಾಗತಿಸಿದರು. ಜಿಲ್ಲಾ ರೋವರ್ ನೋಡಲ್ ಅಧಿಕಾರಿ ಯಾದ ಶ್ರೀ.ಹೆಚ್. ತಿಪ್ಪೇಸ್ವಾಮಿಯವರು ಕಾರ್ಯಕ್ರಮದ ಪ್ರಾಸ್ತಾವಿಕ ಮಾತುಗಳಾಡಿದರು.

* ಜೂನ್ 15 ರಂದು ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗದಲ್ಲಿ ರಾಜ್ಯ ಪುರಸ್ಕಾರ ಪಡೆದ ರೋವರ್ಸ್ ಮ್ತು ರೇಂಜರ್ಸ್‌ಗಳು ನೂತನವಾಗಿ ರೋವರ್ಸ್–ರೇಂಜರ್ಸ್‌ಗಳ ಘಟಕ ನಾಮ ಫಲಕವನ್ನು ನಿರ್ಮಿಸಿದ್ದಾರೆ.

## ಧಾರವಾಡ

* ಜೂನ್ 05 ರಂದು ಬೆಳಿಗ್ಗೆ 8–30ಕ್ಕೆ ಜಿಲ್ಲಾ ಸಂಸ್ಥೆಯ ಆವರಣ ಧಾರವಾಡದಲ್ಲಿ ನಡೆದ ಪರಿಸರ ದಿನಾಚರಣೆಯನ್ನು ಶ್ರೀ ಜಗದೀಶ ಐ.ಎಚ್., ಪರಿಸರ ಅಧಿಕಾರಿಗಳು,





ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರ ಆಶ್ರಯದಲ್ಲಿ ಆಚರಿಸಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಮತಿ ದಿವ್ಯಾಪ್ರಭು ಇವರು ಗಿಡ ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಿ ಮಾತಾಡಿ. "ಮಕ್ಕಳು ಪರಿಸರ ಬಗ್ಗೆ ಕಾಳಜಿ ವಹಿಸಬೇಕು. ಪರಿಸರವನ್ನು ಪ್ರೀತಿಸಬೇಕು. ಇವತ್ತು ಒಂದು ದಿನ ಗಿಡವನ್ನು ನಡೆವುದು ಅಲ್ಲಾ ಅದನ್ನು ಮರವಾಗಿ ಬೆಳೆಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು" ಎಂದರು. ಶ್ರೀ ಕೆ.ಎಚ್. ನಾಯಕ, ಪರಿಸರ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀಶೈಲ ಚ. ಕರೀಕಟ್ಟಿ, ಜಿಲ್ಲಾ ಮುಖ್ಯ ಆಯುಕ್ತರು ಸ್ವಾಗತಿಸಿದರು. ಶ್ರೀ ಜಗದೀಶ ಐ.ಎಚ್., ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾಸ್ತಾವಿಕವಾಗಿ ಮಾಡನಾಡಿದರು. ಜಿಲ್ಲೆಯ ವಿವಿಧ ಶಾಲೆ ಮತ್ತು ಕಾಲೇಜುಗಳಿಂದ 150ಕ್ಕೂ ಹೆಚ್ಚು ರೋವರ್ಸ್ ಮತ್ತು ರೇಂಜರ್ಸ್‌ಗಳು ಹಾಗೂ ಸ್ಕೌಟರ್ಸ್–ಗೈಡರ್ಸ್‌ಗಳು ಭಾಗಹಿಸಿದರು. ಶ್ರೀ ಎಸ್.ಬಿ. ಹುಡೇದಮನಿ ಡಿ. ವ್ಹಾಯ್. ಪಿ.ಸಿ. ಧಾರವಾಡ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದರು.

* ಜೂನ್ 06 ರಂದು ಸರ್ಕಾರಿ ಪ್ರೌಢಶಾಲೆ ಆರ್.ಎನ್.ಎಸ್.ಎ. ಕುಂದಗೋಳ ಶಾಲೆಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಳದಿಂದ ಸ್ಕೌಟ್ ಮಾಸ್ಟರ್ ಆದ ಡಾ. ನಾಗರಾಜ್ ಗವಳಿ ಇವರ ನೇತೃತ್ವದಲ್ಲಿ ಕುಂದಗೋಳ ಪಟ್ಟಣದಲ್ಲಿ ಸ್ವಚ್ಛ ಭಾರತ ಅಭಿಯಾನ ಹಾಗೂ ಸ್ವಚ್ಛ ಪಗ್ವಾಡ ಅಭಿಯಾನವನ್ನು ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಕುಂದಗೋಳ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಯಿತು.



## ಕಲಬುರಗಿ

* ಜೂನ್ 21 ರಂದು ಜಿಲ್ಲಾ ಸಂಸ್ಥೆ ಕಲ್ಬುರ್ಗಿ ವತಿಯಿಂದ 2024–25ನೇ ಸಾಲಿನ ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸ್ಕೌಟ್ಸ್, ರೋವರ್–ರೇಂಜರ್ಸ್‌ಗಳನ್ನು ಯೋಗ ದಿನದಂದು ಪ್ರಶಸ್ತಿ ಪತ್ರ ಸ್ಮರಣ ಸಂಚಿಕೆ ನೀಡಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರಾದ ಶ್ರೀ ಎಸ್.ಪಿ. ಸುಳ್ಳದ್ ಮತ್ತು ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಚನ್ನವೀರಯ್ಯ ಸ್ವಾಮಿ ಮತ್ತು ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದರು.




## ಕೊಡಗು

* ಜೂನ್ 05 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಶಾಲಾ ಶಿಕ್ಷಣ ಇಲಾಖೆ, ರಾಷ್ಟ್ರೀಯ ಹಸಿರು ಪಡೆ ಸಂಘಟನೆಯ ಇಕೋ ಕ್ಲಬ್‌ಗಳು, ಅರಣ್ಯ ಇಲಾಖೆ, ಕೊಡಗು ಜಿಲ್ಲೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಛೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಗರಾಭಿವೃದ್ಧಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಕೊಡಗು, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕೊಡಗು ಜಿಲ್ಲಾ ಸಮಿತಿ ಇವುಗಳ ಸಯುಕ್ತ ಆಶ್ರಯದಲ್ಲಿ 'ಜಾಗತಿಕವಾಗಿ ಪ್ಲಾಸ್ಟಿಕ್ ಮಾಲಿನ್ಯ ಕೊನೆಗಾಣಿಸಿ' ಎಂಬ ಘೋಷ ವಾಕ್ಯದೊಂದಿಗೆ ನಗರದ ಗಾಂಧಿ ಭವನದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ನಡೆಸಲಾಯಿತು. ಮೊದಲಿಗೆ ಗಾಂಧಿ ಭವನದ ಆವರಣದಲ್ಲಿ ಗಣ್ಯರು ಗಿಡ ನೆಟ್ಟು ಪರಿಸರ ದಿನಚರಣೆಗೆ ಮಾತನಾಡಿದ ನ್ಯಾಯಾಧೀಶರು "ಪರಿಸರ ದಿನಾಚರಣೆ ಆಚರಿಸುವ ಮೂಲಕ ಜನರಲ್ಲಿ ಪರಿಸರ ಪ್ರಜ್ಞೆ ಮೂಡಿಸಲಾಗುತ್ತಿದೆ. ಆ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತದೆ. ಪ್ರತಿಯೊಬ್ಬರು ಪರಿಸರ ಸಂರಕ್ಷಣೆಗೆ ಪಣ ತೊಡಬೇಕು" ಎಂದು ಕರೆ ನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿ ಶ್ರೀ ವೆಂಕಟ್‌ರಾಜಾ ಅವರು "ನಾವು ನಮ್ಮ ನೆಲ–ಜಲ, ಅರಣ್ಯ ಹಾಗೂ ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಹಲವು ಶತಮಾನಗಳಿಂದ ಪೂರ್ವಿಕರು ಪರಿಸರ ಸಂರಕ್ಷಣೆ ಮಾಡಿಕೊಂಡು ಬಂದಿದ್ದಾರೆ. ಅದನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸಬೇಕು" ಎಂದರು. ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀಮತಿ ಶುಭ ಅವರು ಮಾತನಾಡಿ "ನಾವು ಅಂಗಡಿ ಮಾರುಕಟ್ಟೆಗೆ ತೆರಳುವಾಗ ಪ್ಲಾಸ್ಟಿಕ್ ಬದಲಿಗೆ ಬಟ್ಟೆ ಬ್ಯಾಗ್‌ಗಳನ್ನು ಬಳಸುವಂತಾಗಬೇಕು, ಕಸದ ನಿರ್ವಹಣೆ ಮನೆಯಿಂದಲೇ ಆಗಬೇಕು" ಎಂದರು. ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಅಭಿಷೇಕ್‌ರವರು ಮಾತನಾಡಿ "ಸುಸ್ಥಿರ ಪರಿಸರ ಸಂರಕ್ಷಣೆ ಮಾಡುವುದು ಪ್ರಕೃತಿಯನ್ನು ಉಳಿಸುವುದು ಎಲ್ಲರ ಕರ್ತವ್ಯವಾಗಿದೆ" ಎಂದರು. "ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪುರಸ್ಕೃತ ರಾಜ್ಯ ವಿಜ್ಞಾನ ಪರಿಷತಿನ ಜಿಲ್ಲಾಧ್ಯಕ್ಷ ಶ್ರೀ ಟಿ.ಜಿ ಪ್ರೇಮ್‌ಕುಮಾರ್ ಪ್ರತಿಜ್ಞಾ ವಿಧಿ ಬೋದಿಸಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀಮತಿ ಜಿಮ್ಮಿ ಸ್ವಿಕೇರಾರವರು ಮಾತನಾಡಿ" ಇರುವುದು ಒಂದೇ ಭೂಮಿ ಇದರ ಸಂರಕ್ಷಣೆ ನಮ್ಮೆಲರ ಹೊಣೆ ಆಗಿದೆ ಈ ಬಗ್ಗೆ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆಗೆ ಹೆಚ್ಚಿನ ಅರಿವು ಮೂಡಿಸಿಕೊಳ್ಳಬೇಕು" ಎಂದರು. ಈ ಕಾರ್ಯದಲ್ಲಿ ಮೊದಲಿಗೆ ಪರಿಸರಾಧಿಕಾರಿ ಶ್ರೀ ಎಂ.ಜಿ. ರಘುರಾಮ್ ಸ್ವಾಗತಿಸಿದರು. ಕಾನೂನು ಪ್ರಾಧಿಕಾರದ ಆಡಳಿತ ಸಹಾಯಕ ಶ್ರೀ ಡಿ.ಎಸ್ ಜಯಪ್ಪ ನಿರೂಪಿಸಿದರು, ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಕೆ.ಯು. ರಂಜಿತ್ ವಂದಿಸಿದರು. ಕಾರ್ಯಕ್ರಮದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ವಕೀಲರ ಸಂಘದ ಅಧ್ಯಕ್ಷರು, ಪೌರ ಆಯುಕ್ತರು, ಜನರಲ್ ತಿಮ್ಮಯ್ಯ ಶಾಲೆಯ ಪ್ರಾಂಶುಪಾಲರು, ಜಿಲ್ಲಾ ಗೈಡ್ ವಿಭಾಗದ ಆಯುಕ್ತೆ ಶ್ರೀಮತಿ ರಾಣಿಮಾಚಯ್ಯ ಹಾಗೂ ಇತರೇ ಪದಾಧಿಕಾರಿಗಳು ಜಿಲ್ಲಾ ಸಂಸ್ಥೆ ಅರಣ್ಯ ಇಲಾಖೆಯ ಸಿಬ್ಬಂದಿಗಳು, ನಗರ ಸಭೆಯ ಸಿಬ್ಬಂದಿಗಳು, ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕ/ಶಿಕ್ಷಕಿಯರು ಉಪಸ್ಥಿತರಿದ್ದರು.



* ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆ ವತಿಯಿಂದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂನ್ 21 ರಂದು ಕೆಳಗಿನ ಗೌಡ ಸಮಾಜ ಮಡಿಕೇರಿ, ಕೊಡಗು ಜಿಲ್ಲೆ ಇಲ್ಲಿ ನಡೆಸಲಾಯಿತು. ಯೋಗ ದಿನಾಚರಣೆಯ ಉದ್ಘಾಟನೆಯನ್ನು ಡಾ॥ ಮಂತರ್ ಗೌಡ, ಸನ್ಮಾನ್ಯ ಶಾಸಕರು, ಮಡಿಕೇರಿ ವಿಧಾನಸಭಾ ಕ್ಷೇತ್ರ ಇವರು ನೆರವೇರಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಶ್ರೀ ರಾಮರಾಜನ್. ಕೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಆನಂದ್ ಪ್ರಕಾಶ ಅ. ಮೀನಾ, ಡಾ॥ ಶೈಲಜಾ ಜೆ., ಜಿಲ್ಲಾ ಆಯುಷ್ ಅಧಿಕಾರಿ (ಪ್ರ)






ಕೊಡಗು ಜಿಲ್ಲೆ. ಶ್ರೀರಂಗದಾಮಪ್ಪ, ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಉನ್ನತ ಮಟ್ಟದ ಅಧಿಕಾರಿಗಳು, ಆಯುಷ್ಯ ಇಲಾಖೆ ಸಿಬ್ಬಂದಿಗಳು, ಶಿಕ್ಷಕರು ಶಿಕ್ಷಕಿಯರು ವಿವಿಧ ಶಾಲೆಗಳಿಂದ ಆಗಮಿಸಿದ ಸ್ಕೌಟ್ಸ್-ಗೌಡ್ಸ್ ಶಿಕ್ಷಕರು, ಶಿಕ್ಷಕಿಯರು ಹಾಗೂ ಕಬ್ಸ್-ಬುಲ್‌ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.

## ಕೊಪ್ಪಳ

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾ ಸಂಸ್ಥೆ ಕೊಪ್ಪಳ ಹಾಗೂ ಕುವೆಂಪು ಶತಮಾನೋತ್ಸವ ಶಾಲೆ ಸಹಕಾರದೊಂದಿಗೆ, ಶಾಲೆಯ ಆವರಣದಲ್ಲಿ, ಕಾರ್ಯಕ್ರಮ ಜರುಗಿಸಲಾಯಿತು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶಾಲೆಯ ಮುಖ್ಯ ಗುರುಗಳು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಪರಮೇಶ್ವರಯ್ಯ, ಗ್ರಾಮ ಪಂಚಾಯತ್ PDO, ಕಿನ್ನಾಳರವರ ಹಾಗೂ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಶಾಲೆಯ ಎಸ್.ಡಿ.ಎಮ್.ಸಿ ಸದಸ್ಯರುಗಳು ಮತ್ತು ಶಾಲೆಯ ಸಿಬ್ಬಂದಿ ವರ್ಗದವರು, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಇದ್ದರು, ಶ್ರೀ ಮಾರುತಿ ಅರೇರ್‌ರವರು ಸರ್ವರನ್ನು ಸ್ವಾಗತಿಸಿದರು, ಪರಿಸರ ದಿನಾಚರಣೆ ಪ್ರಾಸ್ತಾವಿಕ ನುಡಿಗಳನ್ನು ಶ್ರೀಮತಿ ದ್ರಾಕ್ಷಾಯಿಣಿ ಮಾಲಿಪಾಟೀಲರವರು ಮಾಡಿದರು, ನಂತರ ಸರ್ವ ಪದಾಧಿಕಾರಿಗಳು ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳ ಜೊತೆಯಲ್ಲಿ ಸಸಿಗಳನ್ನು ಶಾಲಾ ಆವರಣದಲ್ಲಿ ನೆಟ್ಟರು. ಗ್ರಾಮ ಪಂಚಾಯಿತಿ PDO ರವರು ಪರಿಸರ ದಿನಾಚರಣೆ ಕುರಿತು ಮಾತನಾಡಿದರು. ಶ್ರೀ ಮಾರುತಿ ಅರೇರ್ ಜಿಲ್ಲಾ ಕಾರ್ಯದರ್ಶಿಗಳು ಪರಿಸರ ದಿನಾಚರಣೆಯ ಕುರಿತು ತಮ್ಮ ವಿಶೇಷ ಕವನ ವಾಚನ ಮಾಡಿದರು ನಂತರ ರಾಜ್ಯ ಪುರಸ್ಕಾರ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಶಾಲೆಯ ಗೈಡ್ಸ್ ವಿದ್ಯಾರ್ಥಿಗಳಿಗೆ ಅಧಿಕಾರಿಗಳು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು. ಕೊನೆಯಲ್ಲಿ ಶ್ರೀ ಶರೀಫ್ ಹತ್ತಿಮತ್ತೂರ್ ಎ.ಎಸ್.ಓ.ಸಿ.ರವರು ವಂದನಾರ್ಪಣೆ ಮಾಡಿದರು.




* ಜೂನ್ 10 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ. ಜಿಲ್ಲಾ ಸಂಸ್ಥೆ ಕೊಪ್ಪಳ ಹಾಗೂ ನ್ಯೂ ಎಕ್ಸ್‌ಲೇಂಟ್ ಸ್ಕೂಲ್ ಕೊಪ್ಪಳ ಸಂಯುಕ್ತ ಆಶ್ರಯದಲ್ಲಿ, BALDOTA ಕಂಪನಿಯ, MSPL, ಪೆಲೆಟ್ ಪ್ಲಾಂಟ್ ಹಾಲವರ್ತಿ, ಇವರೊಂದಿಗೆ, ಸಸಿಗಳನ್ನು ನಡೆಲಾಯಿತು. ಈ ಸಂದರ್ಭದಲ್ಲಿ, ಶ್ರೀ ಹೆಚ್.ಎಮ್. ಸಿದ್ದರಾಮ್ ಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ. BALDOTA ಕಂಪನಿಯ CEO ಶ್ರೀ ಮುರಳಿದರನ್‌ರವರು, ಹಾಗೂ ಶ್ರೀ ಎಸ್.ಎಸ್. ಬಿರಾದಾರ DDPI, ಶ್ರೀ ಶಂಕರಯ್ಯ BEO, ಶ್ರೀ ಮಲ್ಲಿಕಾರ್ಜುನ ಚೌಕಿ ಮಠ ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಶಾಲೆಯ ಸ್ಕೌಟ್ಸ್-ಗೈಡ್ಸ್ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಾಲಾ ಆವರಣದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳು ಇಲಾಖೆ ಅಧಿಕಾರಿಗಳು ಪದಾಧಿಕಾರಿಗಳು ಹಾಗೂ BALDOTA ಕಂಪನಿಯ ಮುಖ್ಯಸ್ಥ ಸೇರಿ ಸಸಿಗಳನ್ನು ನೆಟ್ಟರು. ವಿದ್ಯಾರ್ಥಿಗಳಿಗೆ ಪರಿಸರ ದಿನಾಚರಣೆ ಕುರಿತು ಪ್ರಬಂಧ, ಚಿತ್ರಕಲೆ, ಸ್ಪರ್ಧೆಗಳನ್ನು ಏರ್ಪಡಿಸಲಾಗಿ, ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಕೊಪ್ಪಳ ಜಿಲ್ಲೆಯ ಗಂಗಾವತಿ ಸ್ಥಳೀಯ ಸಂಸ್ಥೆಯ ವ್ಯಾಪ್ತಿಗೆ ಬರುವ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಸಸಿ ನೆಡುವುದರ ಮೂಲಕ ಸಸಿಗೆ ನೀರುಣಿಸುವುದರ ಮೂಲಕ, ಪ್ಲಾಸ್ಟಿಕ್ ನಿರ್ಮೂಲನೆಯ ಬಗ್ಗೆ, ಪರಿಸರ ಜಾಗೃತಿ ಜಾಥಾ ಮಾಡುವುದರ ಮೂಲಕ ಆಚರಿಸಲಾಯಿತು.

* ಗಂಗಾವತಿ ಸ್ಥಳೀಯ ಸಂಸ್ಥೆಯ ವತಿಯಿಂದ ವಿಶ್ವ ಪರಿಸರ ದಿನಾಚರಣೆಯನ್ನು ಜೂನ್ 05 ರಂದು ಸರಕಾರಿ ಕೇಂದ್ರ ಹಿರಿಯ ಪ್ರಾಥಮಿಕ ಶಾಲೆ ಗಂಗಾವತಿಯಲ್ಲಿ ಆಚರಣೆ ಮಾಡಲಾಯಿತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೇಂದ್ರ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಶಿವಪುತ್ರಪ್ಪ ಹೊಸಮನಿ ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿ ಸ್ಥಾನವನ್ನು ಹಿರಿಯ ಫ್ಲಾಕ್ ಲೀಡರ್ ಉರ್ದು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಫರಿದಾ ಅಕ್ತರ್‌ರವರು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯರಾದ ಶ್ರೀ ಹುಸೇನಸಾಬ ಮಕಾಂದಾರ ನಿರ್ವಹಿಸಿದರು. ನಂತರ ವಿಶ್ವ ಪರಿಸರ ದಿನಾಚರಣೆಯ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಮಾಡಲಾಯಿತು.

* ಜೂನ್ 21 ರಂದು ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ಆಯುಷ್ ಇಲಾಖೆ ಬೆಂಗಳೂರು, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾ ಸಂಸ್ಥೆ ಕೊಪ್ಪಳ ಇವರುಗಳ ಸಂಯುಕ್ತಾಶ್ರಯದಲ್ಲಿ ತಾಲೂಕು ಕ್ರೀಡಾಂಗಣ ಕೊಪ್ಪಳದಲ್ಲಿ ಬೆಳಿಗ್ಗೆ 6 ಗಂಟೆಗೆ ಯೋಗ ಪ್ರದರ್ಶನವನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ಮಾನ್ಯ ಶ್ರೀ ರಾಜಶೇಖರ ಹಿಟ್ನಾಳ ಸಂಸದರು, ಹಾಗೂ ಶ್ರೀಮತಿ ಹೇಮಲತಾ ನಾಯಕ್ MLC, ಮಾನ್ಯ ಜಿಲ್ಲಾಧಿಕಾರಿಗಳು ಶ್ರೀ ಸುರೇಶ್ ಇಟ್ನಾಳ, ZP CEO ಶ್ರೀ ವರ್ಣಿತ ನೇಗಿ, SP ಶ್ರೀ ರಾಮ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಶ್ರೀ ಸಿದ್ದರಾಮೇಶ್ವರ, ಆಯುಷ್ ಇಲಾಖೆ ಜಿಲ್ಲಾ ಅಧಿಕಾರಿಗಳು ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು. ನಗರದ ಎಲ್ಲಾ ಶಾಲೆಯ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಜಿಲ್ಲಾ ಪದಾಧಿಕಾರಿಗಳು ಹಾಗೂ ಶಿಕ್ಷಕರು ಯೋಗಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು ಹಾಗೂ ಕೊಪ್ಪಳದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ



## ದಕ್ಷಿಣ ಕನ್ನಡ

* ಮೇ 23 ರಂದು ದಕ್ಷಿಣ ಕನ್ನಡ ಜಿಲ್ಲಾ ಸ್ಕೌಟ್–ಗೈಡ್ ತರಬೇತಿ ಕೇಂದ್ರ ಶಿವನಗರ ಪಿಲಿಕುಳ ಇಲ್ಲಿ ಸೈಂಟ್ ಅಲೋಶಿಯಸ್ ಬಿ.ಎಡ್. ಕಾಲೇಜಿನ 40 ಶಿಕ್ಷಣಾರ್ಥಿಗಳಿಗೆ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್.ರವರ ನಾಯಕತ್ವದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಸ್ಕೌಟರ್ ಶ್ರೀ ವೆಂಕಟ್‌ರಾವ್, ಗೈಡರ್ ಶ್ರೀಮತಿ ಪೂರ್ಣಿಮ ಸಂಪನ್ಮೂಲ ವ್ಯಕ್ತಿಗಳಾಗಿ ಸಹಕರಿಸಿದರು.

* ಮೇ 31 ರಂದು ಸ್ಕೌಟ್–ಗೈಡ್ ಕನ್ನಡ ಭವನ ಮೂಡಬಿದ್ರೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಮ್. ಮೋಹನ್ ಆಳ್ವರವರ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರನ್ನು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಪರವಾಗಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ದ.ಕ. ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಕಿಣಿ, ಉದ್ಯಮಿ ದಾನಿಗಳಾದ ಶ್ರೀ ಶಶಿಧರ್ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳು, ಅಧ್ಯಕ್ಷರು, ಕೋಶಾಧಿಕಾರಿಗಳು. ಎ.ಡಿ.ಸಿ.ಗಳು ಹಾಗೂ ಕೋಶಾಧಿಕಾರಿ ಶ್ರೀ ನವೀನ್‌ಚಂದ್ರ ಅತಿಥಿಗಳನ್ನು ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್. ಧನ್ಯವಾದ ನೀಡಿದರು.



* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಮಂಗಳೂರು ರೈಲ್ವೆ ನಿಲ್ದಾಣ ಜಂಕ್ಷನ್ ಹಾಗೂ ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯ ಸೈಂಟ್ ಜೋಸೆಫ್ ಬಜಾಲ್ ವಿದ್ಯಾ ಸಂಸ್ಥೆಗಳು ಹಾಗೂ ಕಂಕನಾಡಿ ರೈಲು ನಿಲ್ದಾಣದ ಆರೋಗ್ಯಾಧಿಕಾರಿ ಶ್ರೀಮತಿ ವಿನಿತರವರ ಮುಂದಾಳತ್ವದಲ್ಲಿ ಗಿಡ ನೆಡುವ ಹಾಗೂ ಪ್ಲಾಸ್ಟಿಕ್ ಹೆಕ್ಕುವ ಕಾರ್ಯಕ್ರಮವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರೈಲ್ವೆ ಇಲಾಖೆಯ ಶ್ರೀ ಅಶೋಕ್‌ರವರು ಭಾಗವಹಿಸಿದರು. ರೈಲ್ವೆ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಶಶಿ ಅವರು ಪ್ರತಿಜ್ಞೆಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪದಾಧಿಕಾರಿಗಳು ಸೈಂಟ್ ಜೋಸೆಫ್ ವಿದ್ಯಾ ಸಂಸ್ಥೆಯ ಸ್ಕೌಟ್–ಗೈಡ್‌ಗಳು ರೈಲ್ವೆ ಇಲಾಖೆಯ ಸಿಬ್ಬಂದಿ ವರ್ಗದವರು ಸಕ್ರಿಯವಾಗಿ ಭಾಗವಹಿಸಿದರು.



– ಜೂನ್ 05 ರಂದು ಸರಕಾರಿ ಪದವಿ ಪೂರ್ವಕಾಲೇಜು, ಬೆಳ್ತಂಗಡಿಯಲ್ಲಿ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್, ಗಣಿತ ಶಿಕ್ಷಕರು ಸರಕಾರಿ ಪ್ರೌಢಶಾಲೆ, ಬೆಳ್ತಂಗಡಿ, ಮಾನ್ಯ ಪ್ರಾಂಶುಪಾಲರಾದ ಶ್ರೀ ಸುಕುಮಾರ್, ರೇಂಜರ್ ಲೀಡರ್ ಶ್ರೀಮತಿ ಅಮೃತಾ ರಶ್ಮಿ ಫೆರ್ನಾಂಡಿಸ್ ಉಪಸ್ಥಿತರಿದ್ದರು. ರೇಂಜರ್ಸ್‌ಗಳು ಬೀಜದುಂಡೆ ತಯಾರಿಸಿದರು. ರೇಂಜರ್ ಪ್ರಜ್ಞ ಸ್ವಾಗತಿಸಿ ಹರ್ಷಿತ ವಂದಿಸಿದರು, ಕೀರ್ತನ ನಿರೂಪಣೆಯನ್ನು ಮಾಡಿದರು.

* ಜೂನ್ 05 ರಂದು ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ, ಮೂಡಬಿದಿರೆ ಇಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿಜಯ ಕರ್ನಾಟಕ ದಿನ ಪತ್ರಿಕೆಯವರು ಆಯೋಜನೆ ಮಾಡಿದ ಚಿತ್ರಕಲೆ ಸ್ಪರ್ಧೆ–2025 ಕಾರ್ಯಕ್ರಮದಲ್ಲಿ ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆ ಮೂಡಬಿದಿರೆಯ ಸ್ಕೌಟ್–ಗೈಡ್‌ಗಳು ಭಾಗವಹಿಸಿದರು.

* ಜೂನ್ 05 ರಂದು ಆಳ್ವಾಸ್ ಶಿಕ್ಷಣ ಸಂಸ್ಥೆ ಮೂಡಬಿದಿರೆ ಇವರ ಆಶ್ರಯದಲ್ಲಿ ಕಬ್–ಬುಲ್‌ಬುಲ್, ಸ್ಕೌಟ್–ಗೈಡ್ ವಿಭಾಗಗಳಿಂದ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪರಿಸರ ಘೋಷಣೆಗಳ ಜಾಥಾ, ಪೋಷಕರಿಗೆ ಸಸಿ ವಿತರಣೆ, ಪರಿಸರ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಮುಖ್ಯ ಅತಿಥಿಯಾಗಿ ಶ್ರೀ ಭರತ್‌ರಾಜ್ ಕೆ, ರಾಜ್ಯ ಸಹ ಸಂಘಟನಾ ಆಯುಕ್ತರು, ಆಳ್ವಾಸ್ ಸಂಸ್ಥೆಯ ಸ್ಕೌಟ್–ಗೈಡ್, ಕಬ್–ಬುಲ್‌ಬುಲ್, ಸ್ಕೌಟರ್–ಗೈಡರ್ ಹಾಗೂ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸಂಧ್ಯಾ, ಸ್ವಾಗತ ಶ್ರೀ ಪ್ರಸಾದ್ ಆಚಾರ್ಯ, ಪ್ರತಿಜ್ಞಾ ಸ್ವೀಕಾರ ಗೈಡರ್ ರಶ್ಮಿ ಆಚಾರ್ಯ ಹಾಗೂ ಧನ್ಯವಾದ ಲೇಡಿ ಸ್ಕೌಟರ್ ಶ್ರೀಮತಿ ದೀಪಾ ಗುಣಗ ನೆರವೇರಿಸಿದರು.




* ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮಶಾಲೆ, ಧರ್ಮಸ್ಥಳದಲ್ಲಿ ಜೂನ್ 06 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಪರಿಸರ ಸಂಘ ಮತ್ತು ಸ್ಕೌಟ್–ಗೈಡ್‌ನ ಜಂಟಿ ಆಶ್ರಯದಲ್ಲಿ ಆಚರಿಸಲಾಯಿತು. ಶಾಲಾ ಸಹ ಶಿಕ್ಷಕಿ ಸ್ಕೌಟ್ ಮಾಸ್ಟರ್ ಶ್ರೀಮತಿ ಆಶಾ, ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಪರಿಮಳ, ಪರಿಸರ ಸಂಘದ ಶಿಕ್ಷಕಿ ಶ್ರೀಮತಿ ಅಮೃತ ವಿ. ಶೆಟ್ಟಿ, ಗೈಡ್ ಕ್ಯಾಪ್ಟನ್ ಶ್ರೀಮತಿ ಗೀತಾ, ಶ್ರೀಮತಿ ಶೀಭಾ, ಶ್ರೀಮತಿ ದೀಕ್ಷಾ, ಸ್ಕೌಟ್ ಮಾಸ್ಟರ್ ಶ್ರೀಮತಿ ಶಶಿಕಲಾ, ಶ್ರೀಮತಿ ಜ್ಯೋತಿ ಉಪಸ್ಥಿತರಿದ್ದರು.

* ಜೂನ್ 05 ರಂದು ಶ್ರೀ ನಾರಾಯಣಗುರು ವಿದ್ಯಾ ಸಂಸ್ಥೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ "ಗುರುಜ್ಯೋತಿ" ವಿಭಾಗದ ಸ್ಕೌಟ್–ಗೈಡ್, ರೋವರ್–ರೇಂಜರ್ ತಂಡದಿಂದ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಭಾಸ್ಕರ್ ಸಾಲ್ಯಾನ್, ಶಾಲಾ ಸಂಚಾಲಕರಾದ ಶ್ರೀ ಹರೀಂದ್ರ ಸುವರ್ಣ, ಶ್ರೀ ಹೇಮರಾಜ್, ಶ್ರೀ ಯೋಗೀಶ್ ಕೋಟ್ಯಾನ್, ಶ್ರೀಮತಿ ಮಂಜುಳಾ ಮತ್ತುಎಲ್ಲಾ ದಳ ನಾಯಕರು ಮತ್ತು ಶಿಕ್ಷಕರು ಉಪಸ್ಥಿರಿದ್ದರು. ಶಾಲಾ ಪ್ರಾಂಶುಪಾಲರಾದ ಶ್ರೀ ಯತೀಶ್ ಅಮೀನ್ ಕಾರ್ಯಕ್ರಮ ನಿರ್ವಹಿಸಿದರು.



* ವಿಟ್ಲ ಬಸವನಗುಡಿಯಲ್ಲಿರುವ ವಿಠ್ಠಲ್ ಜೇಸಿಸ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ವತಿಯಿಂದ ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ವಲಯ ಅರಣ್ಯಾಧಿಕಾರಿ ಶ್ರೀ ವೀರಣ್ಣ ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಜೊತೆ ಕಾರ್ಯದರ್ಶಿ ಶ್ರೀ ಪ್ರಕಾಶ್ ಕುಕ್ಕಿಲ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಹಿರಿಯ ನಿರ್ದೇಶಕರಾದ ಶ್ರೀ ಹಸನ್ ವಿಟ್ಲ, ವಲಯ ಅರಣ್ಯಾಧಿಕಾರಿಗಳಾದ ಶ್ರೀ ಸತೀಶ್, ಶಾಲಾ ಉಪ ಪ್ರಾಂಶುಪಾಲರಾದ ಜ್ಯೋತಿ ಶೆಣೈ ಉಪಸ್ಥಿತರಿದ್ದರು. ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ರಾಧಾಕೃಷ್ಣ ಎರುಂಬು ವಂದಿಸಿದರು. ಸಂಸ್ಥೆಯ ಸ್ಕೌಟ್–



ಗೈಡ್ ತರಬೇತುದರರಾದ ಶ್ರೀಮತಿ ಜಯಶ್ರೀ ಕಾರ್ಯಕ್ರಮವನ್ನು ನಿರ್ವಹಿಸಿದರು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಸರಕಾರಿ ಪ್ರೌಢಶಾಲೆ, ಸದಾಶಿವನಗರದಲ್ಲಿ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸರಕಾರಿ ಪ್ರೌಢಶಾಲೆ, ಕಿನ್ನಿ ಕಂಬಳ ಇಲ್ಲಿ ಎಲ್ಲಾ ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಸೇರಿ ಬೀಜದ ಉಂಡೆಯನ್ನು ತಯಾರಿಸಿದರು. ನಂತರ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಸೇರಿಗಿಡವನ್ನು ನೆಟ್ಟು ಮನೆಗೊಂದು ಗಿಡ ಊರಿಗೊಂದು ವನ ಎಂಬ ಉದ್ಘೋಷವನ್ನು ಮಾಡಿದರು. ಪರಿಸರದ ಸ್ವಚ್ಛತೆಗಾಗಿ ಕಸದ ವಿಂಗಡಣೆಯನ್ನು ಮಾಡುವ ವಿಧಾನವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಲಾಯಿತು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ, ಮುಂಡೂರು ಇಲ್ಲಿ ಅಬ್ಬಕ್ಕ ಗೈಡ್ ದಳ, ಅವನೀ ಇಕೋ ಕ್ಲಬ್, ಮಹಾಲಿಂಗೇಶ್ವರ ಸಂಜೀವಿನಿ ಒಕ್ಕೂಟ, ಗ್ರಾಮ ಪಂಚಾಯತ್ ಮುಂಡೂರು ಹಾಗೂ ಎಫ್.ಎನ್.ಎಚ್.ಡಬ್ಲ್ಯೂ ಘಟಕ ಮುಂಡೂರು ಇದರ ಸಹಯೋಗದೊಂದಿಗೆ ಗಿಡ ನೆಟ್ಟು ಪರಿಸರ ರಕ್ಷಣೆಯ ಬಗ್ಗೆ ಮಾಹಿತಿ ಕಾರ್ಯಾಗಾರ ನಡೆಸಿಕೊಡಲಾಯಿತು.



*ಜಾಗತಿಕ ಮಟ್ಟದಲ್ಲಿ ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟುವಧ್ಯೇಯ ವಾಕ್ಯದೊಂದಿಗೆ ಜೂನ್ 05 ರಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಕಿರಿಯ ಪ್ರಾಥಮಿಕ ಶಾಲೆ, ಲಕ್ಷ್ಮಿಕೋಡಿಯಲ್ಲಿ ಬುಲ್‌ಬುಲ್ ದಳದಿಂದ ವಿಶ್ವ ಪರಿಸರ ದಿನಾಚರಣೆಯನ್ನು ಶಾಲಾ ಪರಿಸರ ಸ್ವಚ್ಛತೆ, ಶಾಲಾ ಕೈತೋಟ ಸ್ವಚ್ಛತೆ ಹಾಗೂ ಗಿಡ ನೆಡುವ ಕಾರ್ಯಕ್ರಮದೊಂದಿಗೆ ಆಚರಿಸಲಾಯಿತು.

* ಡಿ.ಜೆ. ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ, ಮೂಡಬಿದಿರೆಯಲ್ಲಿ ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

* ಜೂನ್ 05 ರಂದು ಶಾರದಾ ವಿದ್ಯಾಲಯ, ಕೊಡಿಯಾಲ್‌ಬೈಲ್, ಮಂಗಳೂರು ಇಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಅತಿಥಿಗಳಾಗಿ ಮೂಡಬಿದಿರೆ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕರಾವಳಿ ನಿಯಂತ್ರಣ ವಲಯ ಮಂಗಳೂರು–ಉಡುಪಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಪಿ. ಕರ್ಕೇರರವರು ಭಾಗವಹಿಸಿದ್ದರು. ಶಾರದಾ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀಮತಿ ಚಂದ್ರಿಕಾ ಭಂಡಾರಿ, ಶ್ರೀ ದಯಾನಂದ ಕಟೀಲ್, ಉಪ–ಪ್ರಾಂಶುಪಾಲರಾದ ಶ್ರೀಮತಿ ಲಕ್ಷ್ಮೀ ಉಡುಪ ಕೆ, ಲಕ್ಷ್ಮೀ ಪೈ ವೇದಿಕೆಯಲ್ಲಿ ಉಪಸ್ಥಿತರಿದ್ದರು. ತನಿಷಾ, ಅವಂತಿಕಾ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಚೇತನ್ ರಾವ್ ಸ್ವಾಗತಿಸಿದರು.

* ಜೂನ್ 05 ರಂದು ಸ್ವಸ್ತಿಕ ನ್ಯಾಷನಲ್ ಬ್ಯುಸಿನೆಸ್ ಸ್ಕೂಲ್ ಇಲ್ಲಿನ ರೋವರ್ಸ್–ರೇಂಜರ್ಸ್ ದಳದಿಂದ ಸುಲ್ತಾನ್ ಬತ್ತೇರಿಯಲ್ಲಿ ಇರುವ "ವಾಟರ್ ಫ್ರಂಟ್" ನಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.

* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜಾಗತಿಕ ಮಟ್ಟದಲ್ಲಿ ಪ್ಲಾಸ್ಟಿಕ್ ಮಾಲಿನ್ಯವನ್ನು ತಡೆಗಟ್ಟುವ ಮೂಲ ಉದ್ದೇಶದಂತೆ ಪ್ಲಾಸ್ಟಿಕ್ ಮುಕ್ತ ಸಿಂಧೂರ ವನ ಕಾರ್ಯಕ್ರಮವನ್ನು ಸಾಂದೀಪನಿ ವಿದ್ಯಾಸಂಸ್ಥೆ ನರಿಮೊಗರು, ಪುತ್ತೂರು ಇಲ್ಲಿನ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ವಿದ್ಯಾರ್ಥಿಗಳು ಆಚರಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯೋಪಾಧ್ಯಾಯರಾದ ಶ್ರೀ ಪ್ರಸನ್ನ, ಸಂಸ್ಥೆಯ ಸಂಚಾಲಕರಾದ ಶ್ರೀ ಭಾಸ್ಕರ್ ಆಚಾರ್ ಹಿಂದಾರು, ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ಶಿಕ್ಷಕರು ಹಾಗೂ ಎಲ್ಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

* ಜೂನ್ 07 ರಂದು ಸಂತ ಫಿಲೋಮಿನಾ ಪದವಿ ಪೂರ್ವಕಾಲೇಜು, ದರ್ಬೆ, ಪುತ್ತೂರು ಇಲ್ಲಿನ ರೋವರ್ಸ್ ಮತ್ತು ರೇಂಜರ್ಸ್ ಘಟಕ, ಸಂಸ್ಕೃತ ಸಂಘ ಮತ್ತು ಮಾನವೀಕ ಸಂಘಗಳ ಸಹಯೋಗದೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪಾಣಾಜೆಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ "ಇಕೋ ವಾರಿಯರ್ಸ್" ಪರಿಸರ ದಿನಚರಣೆ ಮತ್ತು ಶಾಲಾ ಸ್ವಚ್ಛತಾ ಕಾರ್ಯಕ್ರಮ ಎಂಬ ಶೀರ್ಷಿಕೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಧ್ಯಕ್ಷರಾಗಿ ಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಸೀತಾರಾಮ, ಗೌರವ ಅತಿಥಿಗಳಾಗಿ ಶ್ರೀ ಮಾಂಕು ಮೂಲ್ಯ, ಸಹಾಯಕ ಶಿಕ್ಷಕರು, ಪಾಣಾಜೆ ಶಾಲೆ, ಶ್ರೀ ಸಂದೇಶ್ ಜಾನ್ ಲೋಬೋ, ಶ್ರೀ ಸುರೇಶ್‌ಕುಮಾರ್, ಶ್ರೀ ಚಂದ್ರಾಕ್ಷ, ರೋವರ್ ಸ್ಕೌಟ್ ಲೀಡರ್, ಸಂತ ಫಿಲೋಮಿನಾ ಪದವಿ ಪೂರ್ವಕಾಲೇಜು ಮತ್ತು ಪಾಣಾಜೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶ್ರೀ ಸನತ್‌ಕುಮಾರ್ ಉಪಸ್ಥಿತರಿದ್ದರು.



## ಚಿಕ್ಕಮಗಳೂರು

* "ಮಕ್ಕಳು ವಿದ್ಯಾರ್ಥಿ ದೆಸೆಯಿಂದಲೇ ಶಿಸ್ತುಬದ್ಧ ಜೀವನ, ಸಾಮಾಜಿಕ ಕಳಕಳಿ ಅಳವಡಿಸಿಕೊಳ್ಳಬೇಕು. ಸಮಾಜವನ್ನು ಎದುರಿಸುವ ಶಕ್ತಿಯನ್ನು ಮೈಗೂಡಿಸಿಕೊಂಡಲ್ಲಿ ಜಗತ್ತಿನ ಪ್ರೀತಿಯನ್ನು ಸಂಪಾದಿಸಬಹುದು ಎಂದು ನಿವೃತ್ತ ಉಪನ್ಯಾಸಕ ಶ್ರೀ ಬಿ.ಟಿ. ತಿಪ್ಪೇರುದ್ರಪ್ಪ ಹೇಳಿದರು. ನಗರ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ನಡೆದ ಜಿಲ್ಲಾ ಸಂಸ್ಥೆಯ 2024–25ನೇ ಸಾಲಿನ ಜಿಲ್ಲಾ ಮಟ್ಟದ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪ್ರತಿಭಾನ್ವಿತ ಸ್ಕೌಟ್ಸ್–ಗೈಡ್ಸ್‌ಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಿಲ್ಲಾ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರನಾಯ್ಕ್ ಮಾತನಾಡಿದ "ಇತ್ತೀಚಿನ ಮಕ್ಕಳಲ್ಲಿ ಮೊಬೈಲ್ ಹಾವಳಿ ಹೆಚ್ಚು ಆವರಿಸಿಕೊಂಡಿದೆ. ತಲೆ ತಗ್ಗಿಸಿ ಪುಸ್ತಕ ಓದಿದರೆ, ಭವಿಷ್ಯದಲ್ಲಿ ತಲೆ ಎತ್ತುವಂತೆ ಮಾಡುತ್ತದೆ. ಅದೇ ಮೊಬೈಲ್ ದಾಸರಾದರೆ ಜೀವನಮೂರ್ತಿ ತಲೆಬಗ್ಗಿಸಿಕೊಂಡೇ ಇರಬೇಕಾಗುತ್ತದೆ" ಎಂದು ಎಚ್ಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಎಂ.ಎನ್. ಷಡಕ್ಷರಿ "ಯುವ ಜನರು ದೈಹಿಕವಾಗಿ, ಮಾನಸಿಕವಾಗಿ ಸಾಮಾಜಿಕಾಗಿ ಮತ್ತು ಆಧ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಲು ಸ್ಕೌಟ್ಸ್ ಮತ್ತು ಗೈಡ್ಸ್ ಸಹಾಯ ಮಾಡುವ ಜೊತೆಗೆ ನಾಯಕತ್ವ ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸುತ್ತದೆ" ಎಂದು ತಿಳಿಸಿದರು. ಇದೇ ವೇಳೆ ಹನ್ನೊಂದು ಶಾಲೆಗಳಿಂದ ಸುಮಾರು 70ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಗಳಿಸಿದವರಿಗೆ ಅಭಿನಂದನೆ, ನೆನಪಿನ ಕಾಣಿಕೆಯನ್ನು ವಿತರಿಸಲಾಯಿತು.



## ರಾಯಚೂರು

* **15** ರಂದು ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಸನ್ಮಾನ್ಯ ಶ್ರೀ. ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು, ಈ ಸಭೆಗೆ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಮಾನ್ಯ ಶ್ರೀ ಎನ್.ಎಸ್. ಬೋಸ್ ರಾಜು, ಮಾನ್ಯ ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಮುಖ್ಯ ಆತಿಥಿಗಳಾಗಿ ಶ್ರೀ ಕುಮಾರ ನಾಯಕ, ಮಾನ್ಯ ಲೋಕಸಭಾ ಸದಸ್ಯರು ಆಗಮಿಸಿದ್ದರು. ಸಭೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಸವರಾಜ್ ಬೋರೆಡ್ಡಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ಗದಗಿನ, ಜಿಲ್ಲಾ ಖಜಾಂಚಿಗಳಾದ ಶ್ರೀಮತಿ ದಾನಮ್ಮ ಹಾಗೂ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ್ ಭಟ್, ಕಲ್ಯಾಣ ಕರ್ನಾಟಕ ಉಸ್ತುವಾರಿಗಳಾದ ಶ್ರೀಮತಿ ಮಲ್ಲೇಶ್ವರಿ ಜುಜಾರೇ ಹಾಗೂ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಧ್ಯಾಕ್ಷರು, ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಸಂಸ್ಥೆಯ ನೂತನ ಕಟ್ಟಡವನ್ನು ವೀಕ್ಷಿಸಿ, ಬದಲಾವಣೆಗಳಿಗೆ ಮಾನ್ಯ ಸಚಿವರು ಅಧಿಕಾರಿಗಳಿಗೆ ಸಹಕರಿಸಲು ಆದೇಶಿಸಿದರು.



## ರಾಮನಗರ

* ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಪ್ರಗತಿ ವಿದ್ಯಾ ನಿಕೇತನ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಹಾರೋಹಳ್ಳಿ ಟೌನಿನ ಇಕ್ಕೆಲಗಳಲ್ಲಿ ಹಾಗೂ ಆದಿಚುಂಚನಗಿರಿ ಬೆಟ್ಟದಲ್ಲಿ ಬೀಜದ ಉಂಡೆಯನ್ನು ವಿತರಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕ್ಷೇತ್ರದ ಶಾಸಕರಾದ ಶ್ರೀ ಇಕ್ಬಾಲ್ ಹುಸೇನ್ ನೆರವೇರಿಸಿದರು. ಪಟ್ಟಣ ಪಂಚಾಯಿತಿ ಕಾರ್ಯಾಧ್ಯಕ್ಷರಾದ ಶ್ರೀಮತಿ ಶ್ವೇತಾಬಾಯಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಶಿವನಂಜಪ್ಪ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಅರ್ಜುನ್, ಪರಿಸರವಾದಿ ಶ್ರೀ ನಾಗರಾಜು, ಸ್ಕೌಟರ್ಸ್–ಗೈಡರ್ಸ್ ಮತ್ತು ಸಿಬ್ಬಂದಿ ಹಾಗೂ ಸ್ಥಳೀಯ ಪದಾಧಿಕಾರಿಗಳು ಭಾಗವಹಿಸಿದ್ದರು.



## ವಿಜಯನಗರ

* ಜಿಲ್ಲಾ ಸಂಸ್ಥೆ ವಿಜಯನಗರ ವತಿಯಿಂದ ಜೂನ್ **09** ರಂದು ತಾಲ್ಲೂಕು ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಯೋಜನಾ ಸಮಿತಿ ಸದಸ್ಯರು ಹಾಗೂ ಜಿಲ್ಲಾ ಹಿಮಾಲಯ ವೃಕ್ಷಮಣಿಧಾರಕರ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥಪ್ಪ ಪಿ., ಜಿಲ್ಲಾ ಕಾರ್ಯದರ್ಶಿಗಳು ವಹಿಸಿದ್ದರು. ಜಿಲ್ಲಾ ತರಬೇತಿ ಆಯುಕ್ತರು ಗೈಡ್ಸ್ ಶ್ರೀಮತಿ ರೇಣುಕಾ ಎ., ಹಿಮಾಲಯ ವೃಕ್ಷಮಣಿಧಾರಕರಿಗೆ ತಾಲ್ಲೂಕು ಹಂತದಲ್ಲಿ ಹಾಗೂ ಜಿಲ್ಲಾ ಹಂತದಲ್ಲಿ ನಡೆಯುವ ಸ್ಕೌಟ್–ಗೈಡ್ ತರಬೇತಿ ಶಿಬಿರಗಳು, ಪರೀಕ್ಷಾ ಶಿಬಿರಗಳಿಗೆ ತಮ್ಮ ಸಹಕಾರದ ಜೊತೆಗೆ ತಮ್ಮ ದಳಗಳನ್ನು ಸಕ್ರಿಯವಾಗಿ ನಡೆಸಿ ದಳ ನಾಯಕರುಗಳಿಗೆ ಮಾದರಿಯಾಗಿ ಇರಲು ಹಾಗೂ ತರಬೇತಿ ಪಡೆದ ಎಲ್ಲಾ ಸ್ಕೌಟರ್–ಗೈಡರ್ಸ್‌ಗಳಿಗೆ ದಳಗಳನ್ನು ನಡೆಸಲು ಪ್ರೋತ್ಸಾಹ ನೀಡಲು ಕೋರಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಮಂಜುನಾಥಪ್ಪ ಪಿ. ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ ಬ್ಯಾಡ್ಜ್ ಕಮಿಟಿ ಇದ್ದು, ಜಿಲ್ಲಾ ಹಾಗೂ ತಾಲ್ಲೂಕು ಹಂತದಲ್ಲಿ ನಡೆಯುವ ಪರೀಕ್ಷೆಗಳಿಗೆ ಮಕ್ಕಳು ಪರಿಪೂರ್ಣಜ್ಞಾನ ಹೊಂದಲು ಪ್ರಾವಿಣ್ಯತಾ ಪದಕದ ಪ್ರಮಾಣ ಪತ್ರಜೊತೆಗೆ ಪದಕಗಳನ್ನು ಜಿಲ್ಲಾ ಪದಕ ಸಮಿತಿ ನೇಮಕ ಮಾಡಿರುವ ಪರೀಕ್ಷಕರಿಂದ ಮಾತ್ರ ಪ್ರಮಾಣ ಪತ್ರವನ್ನು ಪಡೆದುಕೊಳ್ಳಲು ತಿಳಿಸಿದರು.

* ವಿಶ್ವ ಪರಿಸರ ದಿನಾಚರಣೆ **2025**ರ ಅಂಗವಾಗಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸುವ, ಪರಸರದಿಂದ ಪ್ಲಾಸ್ಟಿಕ್ ನಿರ್ಮೂಲನೆ ಗೊಳಿಸಿ ಎನ್ನುವ ಕುರಿತು ಸೈಕಲ್ ಜಾಥವನ್ನು ಭಾರತ್ ಸ್ಕೌಟ್ಸ್–ಗೈಡ್ಸ್ ಮಕ್ಕಳಿಂದ ಹೊಸಪೇಟೆ ತಾಲ್ಲೂಕು ಹಾಗೂ ವಿಜಯನಗರ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಶೇಖರಪ್ಪ ಬಿ. ಹೊರಪೇಟೆ ಹಾಗೂ ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಶ್ರೀ ಮಂಜುನಾಥಪ್ಪ, ತಾಲ್ಲೂಕು ಕಾರ್ಯದರ್ಶಿಗಳು ಶ್ರೀ ತಿಪ್ಪೇಸ್ವಾಮಿ, ಸ್ಥಳೀಯ ಶಾಲೆಗಳಿಂದ ಹಲವು ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಹಾಗೂ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳು ವಿಜಯನಗರ ಟೈಮ್ಸ್‌ನ ಸಂಪಾದಕರು ವೀರೇಶ್ವರ, ಪತ್ರಕರ್ತರು ಈ ಕಾರ್ಯದಲ್ಲಿ ಭಾಗವಹಿಸಿದ್ದರು.



* "ಮಕ್ಕಳಲ್ಲಿ ಧೈರ್ಯ ಆತ್ಮಸ್ಥೈರ್ಯ ಹೆಚ್ಚಿಸಲು ಸ್ಕೌಟ್ಸ್ ಮತ್ತು ಗೈಡ್ಸ್ ಬಹಳ ಉಪಕಾರಿ. ಪರಿಸರ ಜಾಗೃತಿ ವಿಚಾರದಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್ ಸಾಕಷ್ಟು ಶ್ರಮಿಸುತ್ತಿದೆ" ಎಂದು ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಶೇಖರಪ್ಪ ಬಿ. ಹೊರಪೇಟೆ ತಿಳಿಸಿದರು. ಜಿಲ್ಲಾ ಸಂಸ್ಥೆ ವಿಜಯನಗರ ಹಾಗೂ ಸ್ಥಳೀಯ ಸಂಸ್ಥೆ ಹೊಸಪೇಟೆ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸೈಕಲ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಮಂಜುನಾಥಪ್ಪ ಪಿ. ಮಾತನಾಡಿ, "ಸಾರ್ವಜನಿಕರಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸುವುದು ಹಾಗೂ ಪ್ಲಾಸ್ಟಿಕ್ ನಿರ್ಮೂಲನೆಗೊಳಿಸಿ ಎನ್ನುವ ಕುರಿತು ಸೈಕಲ್ ಜಾಥಾವನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗಿದೆ. ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಈ ತಿಂಗಳು ಪ್ರತಿ ಭಾನುವಾರ ಗೂಗಲ್ ಮೀಟ್ ಮೂಲಕ ಪರಿಸರ ತಿಳುವಳಿಕೆ ಮೂಡಿಸಲಾಗುತ್ತಿದೆ" ಎಂದರು. ಸೈಕಲ್ ಜಾಥಾದಲ್ಲಿ ಸುಮಾರು **150** ಸ್ಕೌಟ್ಸ್–ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಪಾಲ್ಗೊಂಡಿದ್ದರು. ವಿಜಯ ಟೈಮ್ಸ್ ಸಂಪಾದಕರಾದ ಶ್ರೀ ವೀರೇಶ್ವರ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ತಿಪ್ಪೇಸ್ವಾಮಿ, ದಳನಾಯಕ–ನಾಯಕಿಯರಾದ ಶ್ರೀ ಜಿ.ಎಂ. ರಾಜಶೇಖರ್, ಶ್ರೀ ಅಕ್ಬರ್ ಅಲಿ, ಶ್ರೀ ರಾಕೇಶ್, ಶ್ರೀ ನಾಗ್‌ಭೂಷಣ್, ಶ್ರೀಮತಿ ಪುಷ್ಪ, ಶ್ರೀಮತಿ ಶಿಲ್ಪಾ ಪಿ, ಜಿಲ್ಲಾ ಸಂಘಟಕರಾದ ಶ್ರೀ ಪಾಟೀಲ್ ಜಿ.ಬಿ.ಸಿ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.





* ಜಿಲ್ಲಾ ಸಂಸ್ಥೆ ವತಿಯಿಂದ ಉದ್ದೇಶಿತ ಸ್ಕೌಟ್–ಗೈಡ್ಸ್ ಭವನದ ನಿರ್ಮಾಣದ ನಿವೇಶನದಲ್ಲಿ ಜೂನ್ 15 ರಂದು ರೋವರ್ಸ್ ಮತ್ತು ರೇಂಜರ್ಸ್‌ಗಳಿಂದ ಸುಮಾರು 20 ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳು ಶ್ರೀ ಮಂಜುನಾಥಪ್ಪ ಪಿ, ಶ್ರೀ ತಿಪ್ಪೇಸ್ವಾಮಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ದಳನಾಯಕರಾದ ಶ್ರೀ ಅಕ್ಬರ್ ಅಲಿ, ಶ್ರೀ ರಾಜಶೇಖರ್ ಎಂ, ಶ್ರೀ ನಥಾನಿಯಲ್ ಸಾಂಗ್ಲಿ ಮತ್ತಿತರರಿದ್ದರು.

## ಯಾದಗಿರಿ

* ಜೂನ್ 05ರಂದು 'ವಿಶ್ವಪರಿಸರ ದಿನಾಚರಣೆ'ಯನ್ನು ಸರ್ಕಾರಿ ಪವಿ ಪೂರ್ವ ಮಹಿಳಾ ಕಾಲೇಜು ಗುರುಮಠಕಲ್ ಇಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಲ್ಲಿಕಾರ್ಜುನ್ ಹೊಸಮನಿ ಪ್ರಾಂಶುಪಾಲರು ಹಾಗೂ ಕಾಲೇಜಿನ ಉಪನ್ಯಾಸಕರಾದ ಶ್ರೀ ವೆಂಕಟರೆಡ್ಡಿ, ಶ್ರೀ ಶ್ರೀರಾಮುಲು ವಾರಡಿ, ಜಿಲ್ಲಾ ಸಂಘಟಕಿ ಶ್ರೀಮತಿ ನಾಗರತ್ನಪಾಟೀಲ ರೇಂಜರ್ಸ್‌ಗಳು ಹಾಗೂ ಇತರರು ಭಾಗವಹಿಸಿದ್ದರು.



# ಶ್ರದ್ಧಾಂಜಲಿ



ಹಾಸನಜಿಲ್ಲೆ ಚನ್ನರಾಯ ಪಟ್ಟಣದ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಸಂಸ್ಥೆಯ ಸ್ಥಾನಿಕ ಆಯುಕ್ತರು ಮತ್ತು ಸಹಾಯಕ ಜಿಲ್ಲಾ ಆಯುಕ್ತರು ಆಗಿದ್ದ **ಶ್ರೀ ಹೆಚ್.ಎಂ. ಗೌಡಯ್ಯರವರು** ಜೂನ್ 29, 2025ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 90 ವರ್ಷ ವಯಸ್ಸಾಗಿತ್ತು. ಶ್ರೀಯುತರು ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಉಪಾಧ್ಯಕ್ಷರು ಮತ್ತು ಎಡಿಸಿಯಾಗಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಇವರು ಚಳವಳಿಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ 'ಮೆಡಲ್ ಆಫ್ ಮೆರಿಟ್ ಪ್ರಶಸ್ತಿ'ಯನ್ನು ನೀಡಲಾಗಿತ್ತು. ಇವರು ಸಾ.ಶಿ. ಇಲಾಖೆಯಲ್ಲಿ ಶಾಲಾ ತನಿಖಾಧಿಕಾರಿಗಳು ಹಾಗೂ ಬ್ಲಾಕ್ ಕಾಂಗ್ರೇಸ್ ಮಾಜಿ ಅಧ್ಯಕ್ಷರು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರು, ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದ ಸಂಚಾಲಕರು, ತಾಲ್ಲೂಕು ಖಾಸಗಿ ಶಾಲೆಗಳ ಅಧ್ಯಕ್ಷರು ಮತ್ತು ಸಮಾಜ ಸೇವಕರಾಗಿದ್ದರು. ಇವರು ಮೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



**ಶ್ರೀ ಜೈರಾಜ್ ಬೂಸದ್,** ಎಲ್.ಟಿ. ಸ್ಕೌಟ್ಸ್ ತರಬೇತಿದಾರರು ಇವರು ಜೂನ್ 17, 2025 ರಂದು ನಿಧನ ಹೊಂದಿರುತ್ತಾರೆ. ಇವರಿಗೆ 70 ವರ್ಷ ವಯಸ್ಸಾಗಿತ್ತು. ಇವರು ಶಿಕ್ಷಕರಾಗಿ ಸೇವೆ ಸಲ್ಲಿಸುವದರೊಂದಿಗೆ ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಸಂಘಟನಾ ಆಯುಕ್ತರಾಗಿ ಸೇವೆ ಸಲ್ಲಿಸಿರುತ್ತಾರೆ, ವಿದ್ಯಾರ್ಥಿಗಳೊಂದಿಗೆ ಜಿಲ್ಲಾ ಮಟ್ಟ, ರಾಜ್ಯ ಮಟ್ಟದಲ್ಲಿ ಶಿಬಿರಗಳಲ್ಲಿ ಭಾಗವಹಿಸಿರುತ್ತಾರೆ. ಚಳುವಳಿಗೆ ತಮ್ಮ ಸಹಕಾರದೊಂದಿಗೆ ಸೇವೆ ಸಲ್ಲಿಸಿ ಸ್ಕೌಟಿಂಗ್‌ನಲ್ಲಿ ಎಲ್.ಟಿ. (ಸ್ಕೌ) ಆಗಿದ್ದರು. ಜಿಲ್ಲಾ ತರಬೇತಿ ಕೇಂದ್ರಕ್ಕೆ ಜಾಗ ಪಡೆಯುವದರಲ್ಲಿ ಶ್ರೀಯುತರ ಶ್ರಮ ಇದೆ. ಇವರು ತಮ್ಮ ಧರ್ಮ ಪತ್ನಿ ಶ್ರೀಮತಿ ಕಸ್ತೂರಿ ಬೂಸದ್‌ರವರು ನಿವೃತ್ತ ಶಿಕ್ಷಕಿಯರಾಗಿರುತ್ತಾರೆ ಹಾಗೂ ಇವರಿಗೆ ಐಶ್ವರ್ಯ ಮತ್ತು ಅಪೂರ್ವ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ.



**ಶ್ರೀ ಕಾಂತಕುಮಾರ್,** ಸ್ಥಳೀಯ ಸಂಸ್ಥೆ ಕರ್ಯದರ್ಶಿ, ಕೊಪ್ಪ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ ಇವರು 2025 ಜೂನ್ 28ರಂದು ನಿಧನಾದರು. ಇವರಿಗೆ 54 ವರ್ಷ ವಯಸ್ಸಾಗಿತ್ತು. ಇವರು ಕೊಪ್ಪದ ಸೆಂಟ್ ಜೋಸೆಫರ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿದ್ದು ಕಬ್ ವಿಭಾಗದಲ್ಲಿ ಹೆಚ್.ಡಬ್ಲ್ಯು.ಬಿ. ತರಬೇತಿಯನ್ನು ಪಡೆದಿದ್ದರು. ಇವರು 25 ವರ್ಷಗಳಿಂದ ಕೊಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಶ್ರೀಯುತರು ತಮ್ಮ ಧರ್ಮಪತ್ನಿ ಮತ್ತು ಇಬ್ಬರು ಹೆಣ್ಣುಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.



**ಶ್ರೀ ಮನೋಜ್ ಕುಮಾರ್,** ಹೆಚ್.ಪಿ., ರಾಜ್ಯ ಪುರಸ್ಕಾರ ರೋವರ್, ಚಾಮರಾಜನಗರ ಇವರು ಜೂನ್ 19, 2025ರಂದು ನಿಧನರಾದರು. ಈತನು ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಬಿ.ಕಾಂ ಪದವಿಯನ್ನು ಮುಗಿಸಿದ್ದು ಜಿಲ್ಲಾ ಸಂಸ್ಥೆಯಲ್ಲಿ ನಾಲ್ಕು ವರ್ಷಗಳಿಂದ ಸ್ಕೌಟ್–ಗೈಡ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದನು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

# ನಿಸರ್ಗದೊಂದಿಗೆ ಸಹಬಾಳ್ವೆಗೆ ಪ್ರೋತ್ಸಾಹಿಸೋಣ

- ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸೋಣ
- ಮಳೆನೀರು ಕೊಯ್ಲು, ಅಂತರ್ಜಲ ಮರುಪೂರ್ಣ ಮಾಡೋಣ
- ಕೆರೆ, ಕುಂಟೆ, ಜಲಸಂಪನ್ಮೂಲಗಳನ್ನು ಸಂರಕ್ಷಿಸೋಣ
- ಮರಗಿಡಗಳನ್ನು ಬೆಳೆಸಿ ಸಂರಕ್ಷಿಸೋಣ
- ಸೌರಶಕ್ತಿ, ಪವನ ಹಾಗೂ ಇತರೆ ನವೀಕರಿಸಬಹುದಾದ ಸಂಪನ್ಮೂಲಗಳನ್ನು ಪ್ರೋತ್ಸಾಹಿಸೋಣ
- ಕಸವಿಂಗಡಣೆ ಮಾಡೋಣ ಹಾಗೂ ತ್ಯಾಜ್ಯ ಉತ್ಪಾದನೆ ಕಡಿಮೆಗೊಳಿಸಲು ಕ್ರಮವಹಿಸೋಣ
- ಪ್ಲಾಸ್ಟಿಕ್ ಬಳಕೆ ತ್ಯಜಿಸೋಣ
- ನಮ್ಮ ವಾಹನಗಳ ಹೊಗೆ ಪ್ರಮಾಣ ಮಿತಿಯಲ್ಲಿಡಲು ಕ್ರಮವಹಿಸೋಣ
- ಹಬ್ಬಗಳನ್ನು ಪರಿಸರ ಸ್ನೇಹಿಯಾಗಿ ಆಚರಿಸೋಣ
- ಕಾರ್ ಪೂಲಿಂಗ್, ಸಾರ್ವಜನಿಕ ಸಾರಿಗೆ ಹೆಚ್ಚಾಗಿ ಬಳಸುವ ಮೂಲಕ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಹಕರಿಸೋಣ




ಸಾರ್ವಜನಿಕರ ಹಿತಾಸಕ್ತಿಯಿಂದ ಪ್ರಕಟಿತ
**ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**
#49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001 ದೂ: 080–2558 6520 / 2558 9112 / 2558 8142 ಫ್ಯಾಕ್ಸ್: 080–2558 6321
ಇಮೇಲ್ : ho@kspcb.gov.in ವೆಬ್‌ಸೈಟ್ : www.kspcb.gov.in

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)




**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**www.bsgkarnataka.org**

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26